ಕರ್ನಾಟಕ ಸರ್ಕಾರ

# ಕಲಿ ಕನ್ನಡ – ೨

## ಪರಿಚಯ ಭಾಷಾ ಕನ್ನಡ ಪಠ್ಯಪುಸ್ತಕ

೨

## ಎರಡನೆಯ ತರಗತಿ

©KTBS Not to be republished

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ,
ಬೆಂಗಳೂರು – ೫೬೦ ೦೮೫

## ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷ** : **ಡಾ. ಸಿ. ಎಸ್. ರಾಮಚಂದ್ರ,** ಪ್ರಾಧ್ಯಾಪಕ ಮತ್ತು ಮುಖ್ಯಸ್ಥ, ಭಾಷಾವಿಜ್ಞಾನ ಅಧ್ಯಯನ ವಿಭಾಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

**ಸದಸ್ಯರು** : **ರಾಮಣ್ಣ ಹವಳೆ,** ನಿವೃತ್ತ ಉಪನ್ಯಾಸಕ, ನೀಲಕಂಠೇಶ್ವರ ನಗರ, ರಾಯಚೂರು

**ರಂಗಪ್ಪಯ್ಯ ಹೊಳ್ಳ,** ಕನ್ನಡ ಭಾಷಾ ಸಹಾಯಕ ನಿವೃತ್ತ, ಶ್ರೀನಿವಾಸ, ಚಿತ್ರಪಾಡಿ, ಸಾಲಿಗ್ರಾಮ ಉಡುಪಿ ಜಿಲ್ಲೆ – ೫೭೬ ೨೨೫

**ಬೆಳವಾಡಿ ಮಂಜುನಾಥ,** ಉಪನ್ಯಾಸಕ, ಸರ್ಕಾರಿ ಪದವಿ ಪೂರ್ವ ಕಾಲೇಜು ಮುತ್ತಿಹಳ್ಳಿ, ಚಿಕ್ಕಮಗಳೂರು ಜಿಲ್ಲೆ – ೫೭೭ ೧೩೯

**ಎ. ಭುಜಂಗಾಚಾರ್,** ಕನ್ನಡ ಭಾಷಾ ಅಧ್ಯಾಪಕ, ಶ್ರೀ ಜ್ವಾಲಾಮಾಲಿನಿ ಬಾಲಿಕಾ ಪ್ರೌಢಶಾಲೆ ನರಸಿಂಹರಾಜಪುರ – ೫೭೭ ೧೩೪

**ಮಹದೇವಯ್ಯ,** ಬಿ. ಆರ್. ಪಿ. ಕ್ಷೇತ್ರ ಸಂಪನ್ಮೂಲ ಕೇಂದ್ರ, ಹೆಗ್ಗಡದೇವನಕೋಟೆ

**ಬಿ. ಬಾಲಕೃಷ್ಣಯ್ಯ,** ಕನ್ನಡ ಭಾಷಾ ಅಧ್ಯಾಪಕ, ಸರ್ಕಾರಿ ಪ್ರೌಢ ಶಾಲೆ, ಬೋಗಾದಿ, ಮೈಸೂರು ತಾಲ್ಲೂಕು – ೫೭೦ ೦೨೬

**ಆರ್. ಡಿ. ರವೀಂದ್ರ,** ಬಿ. ಆರ್. ಪಿ. ಕ್ಷೇತ್ರ ಸಂಪನ್ಮೂಲ ಕೇಂದ್ರ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ – ೫೭೭ ೧೨೬

**ಎಚ್. ಎಸ್. ವಾಣಿ,** ಅಧ್ಯಾಪಕಿ, ಸರ್ಕಾರಿ ಪ್ರೌಢ ಶಾಲೆ, ತುಮಕೂರು

**ಚಿತ್ರರಚನೆ** : **ಜಿ. ಎಂ. ಜಂಗಿ,** ಕಲಾಕಾರರು. ಡಿ.ಎಸ್.ಇ.ಆರ್.ಟಿ. ಬೆಂಗಳೂರು – ೮೫

**ಸಲಹೆ ಮತ್ತು ಮಾರ್ಗದರ್ಶನ** : ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು – ೮೫

**ಸಂಯೋಜಕರು** : **ಶ್ರೀಮತಿ ಉಷಾ ಬಿ. ಗಂಜೀಗಟ್ಟಿ,** ಹಿರಿಯ ಸಹಾಯಕ ನಿರ್ದೇಶಕರು, ಡಿ. ಎಸ್. ಇ. ಆರ್. ಟಿ. ಬೆಂಗಳೂರು – ೫೬೦ ೦೮೫

©KTBS Not to be republished

## ಮುನ್ನುಡಿ

೨೦೦೮–೨೦೦೯ ನೇ ಶೈಕ್ಷಣಿಕ ವರ್ಷದಿಂದ ಕರ್ನಾಟಕ ನಾಡಿನಾದ್ಯಂತ ಕನ್ನಡ ತಾಯ್ನುಡಿ ಅಲ್ಲದವರಿಗೆ ಹಾಗೂ ಆಂಗ್ಲಮಾಧ್ಯಮ ಶಾಲೆಗಳಲ್ಲಿ ಒಂದನೇ ತರಗತಿಯಿಂದ ವ್ಯಾಸಂಗ ಮಾಡುತ್ತಿರುವವರಿಗೆ ಪರಿಚಯ ಭಾಷೆ ಕನ್ನಡವನ್ನು ಕಡ್ಡಾಯಗೊಳಿಸುವುದರ ಮೂಲಕ ಕಲಿಕೆ ಮತ್ತು ಕಲಿಸುವಿಕೆಗೆ ಅನುವಾಗುವಂತೆ ಭಾಷಾವೈಜ್ಞಾನಿಕ ನಿಟ್ಟಿನಲ್ಲಿ ವ್ಯವಸ್ಥಿತವಾಗಿ ಸಂರಚಿಸಿ ನಿಗದಿಪಡಿಸಿದ ಪಠ್ಯವೇ ಕಲಿ ಕನ್ನಡ–೧ ಮತ್ತು ಕಲಿ ಕನ್ನಡ – ೨, ಪ್ರಸ್ತುತ ಪಠ್ಯಪುಸ್ತಕಗಳನ್ನು ನುರಿತ ಭಾಷಾವಿಜ್ಞಾನಿಗಳು, ಶಿಕ್ಷಣ ತಜ್ಞರು ಮತ್ತು ತರಗತಿಯ ಅನುಭವೀ ಅಧ್ಯಾಪಕರನ್ನೊಳಗೊಂಡ ಸಮಿತಿ ಸಿದ್ಧಪಡಿಸಿದೆ. ಭಾಷಾ ಕಲಿಕೆಯಲ್ಲಿ ಮಕ್ಕಳು ಸಹಜ ಹಾಗೂ ಸಕ್ರಿಯವಾಗಿ ಭಾಗಿಯಾಗಿ ಕಲಿಕೆಯ ಸಾಮರ್ಥ್ಯಗಳನ್ನು ಪರಿಣಾಮಕಾರಿಯಾಗಿ ಹೆಚ್ಚಿಸಿಕೊಂಡು ಭಾಷಾ ಜ್ಞಾನವನ್ನು ಸದೃಢವಾಗಿ ಪಡೆದುಕೊಳ್ಳಬೇಕೆಂಬುದೇ ಪಠ್ಯದ ಮೂಲೋದ್ದೇಶ. ಕನ್ನಡ ಭಾಷೆ ಹಾಗೂ ನಾಡಿನ ಬಗೆಗೆ ಹೆಚ್ಚು ಅಭಿಮಾನ, ಆಸಕ್ತಿ, ಅಕ್ಕರೆಯನ್ನು ಬೆಳೆಸಿಕೊಳ್ಳಲು ಪಠ್ಯದಲ್ಲಿನ ಪೂರ್ವಸಿದ್ಧತಾ ಸೇತುಬಂಧ ಪಾಠ, ಚಿತ್ರ ಪಾಠ, ಅಕ್ಷರ ಪಾಠ ಮತ್ತು ಪದ್ಯ–ಗದ್ಯಪಾಠಗಳು ಅನುವಾಗಿವೆ. ಮಕ್ಕಳಲ್ಲಿ ಸೃಜನಶೀಲತೆಯನ್ನು ಮೂಡಿಸುವಲ್ಲಿ ಕಲಿ ಕನ್ನಡ – ೨ ಪಠ್ಯಪುಸ್ತಕ ಸೂಕ್ತವಾಗಿದೆ. ಮಾನವೀಯ ಮೌಲ್ಯಗಳನ್ನು ಸಮಾನಾಂತರ ಹಾಗೂ ಲಂಬ ಶ್ರೇಣಿಯಲ್ಲಿ ಕ್ರಿಯಾತ್ಮಕಗೊಳಿಸುವಲ್ಲಿ ಇಡೀ ಪಠ್ಯ ಸಮರ್ಪಕವಾಗಿದೆ. ಸಂತಸಭರಿತ ಕಲಿಕೆಯಲ್ಲಿ ಆಸಕ್ತಿ, ವಿಶ್ವಾಸ, ನಂಬಿಕೆ ಮತ್ತು ಕುತೂಹಲವನ್ನು ಉಳಿಸಿಕೊಳ್ಳುವ ತಮ್ಮ ಸದಾಶಯ ಬಹುಮಟ್ಟಿಗೆ ಸಫಲತೆಯನ್ನು ಪಡೆದಿದೆ ಎಂಬುದು ನಮ್ಮ ನಮ್ರ ಭಾವ.

ಪ್ರಕೃತ ಕಲಿ ಕನ್ನಡ – ೨ : ಪಠ್ಯ ರಚನಾ ಯೋಚನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಹಕರಿಸಿದ ಎಲ್ಲರಿಗೂ ಅಭಿಮಾನ ಪೂರ್ವಕ ವಂದನೆಗಳು. ಈ ಪಠ್ಯದ ಬಗ್ಗೆ ಬರುವ ಎಲ್ಲ ರೀತಿಯ ಪೂರಕ, ರಚನಾತ್ಮಕ, ಚಿಂತನಶೀಲ ಸಲಹೆ ಸೂಚನೆಗಳನ್ನು ನಿರ್ದೇಶನಾಲಯ ಸದಾ ಮುಕ್ತವಾಗಿ ಸ್ವಾಗತಿಸುತ್ತದೆ.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.
ಬೆಂಗಳೂರು–೮೫.

©KTBS Not to be republished

## ಕಲಿಸುವವರೊಂದಿಗಿನ ಸಮಾಲೋಚನೆ....................

ಆಧುನಿಕರಣ ಮತ್ತು ಜಾಗತಿಕರಣಕ್ಕೆ ಹೊಂದಿಕೊಂಡಂತೆ ಅರಿವಿನ ಕ್ಷಿತಿಜವನ್ನು ಮಾರ್ಪಡಿಸಿ, ಅಳವಡಿಸಿ ಸರಿಪಡಿಸಿಕೊಳ್ಳುತ್ತಾ ಬಹುಮುಖದಿ ವಿಸ್ತರಿಸಿಕೊಳ್ಳುವುದು ಅಗತ್ಯ ಹಾಗೂ ಅನಿವಾರ್ಯ. ಹೊಸಯುಗದ ಬಹುತೇಕ ಅಗತ್ಯ ಆಕಾಂಕ್ಷೆಗಳನ್ನು ಹೊತ್ತುತರುವ ಇತ್ತೀಚಿನ ಶೈಕ್ಷಣಿಕ ಸಂಶೋಧನೆಗಳನ್ನು ಮೈಗೂಡಿಸಿಕೊಂಡು ಹಂತಹಂತವಾಗಿ ಕಲಿಕಾ ಪ್ರಕ್ರಿಯೆ ನಡೆಯಬೇಕು. ಮಕ್ಕಳ ಗ್ರಹಿಕಾ ಸಾಮರ್ಥ್ಯ ಮತ್ತು ಮನೋಬಲಕ್ಕನುಸಾರ ಭಾಷೆ ಮತ್ತು ಕಲಿಕಾ ವಸ್ತು ವ್ಯವಸ್ಥಿತ ಸುಸಂಘಟಿತ ರೂಪದಲ್ಲಿ ಅನಾವರಣಗೊಳ್ಳುತ್ತಾ ದೊರಕಬೇಕು. ನಮ್ಮ ಪರಂಪರೆಯ ಸಂಸ್ಕೃತಿ ಮತ್ತು ಜೀವನ ಮೌಲ್ಯಗಳು ವೈಜ್ಞಾನಿಕ ಹಿನ್ನೆಲೆಯಲ್ಲಿ ದಿಗ್ದರ್ಶಿಸುವಂತಾದಾಗ ಕಲಿಕಾ ಪ್ರಕ್ರಿಯೆ ಸಾರ್ಥಕಗೊಳ್ಳುತ್ತದೆ. ಅದೇ ಇಂದಿನ ಮೌಲಿಕ ಅರ್ಥಪೂರ್ಣ ಕಲಿಕಾ ಶೈಕ್ಷಣಿಕತೆ.

ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಸರ್ಕಾರ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಿ ಕಲಿಕೆ–ಕಲಿಸುವಿಕೆಯ ಗುಣಮಟ್ಟವನ್ನು ಸದೃಢಗೊಳಿಸಿ ಮೌಲೀಕರಿಸುವ ಉದ್ದೇಶದಿ ಕಲಿಕೆಯ ಕನಿಷ್ಠ ಮಟ್ಟಗಳ ಅನ್ವಯಾಧಾರದಿ ಶಾಲಾ ಪಠ್ಯಪುಸ್ತಕಗಳನ್ನು ಸಮರ್ಪಕ ರೀತ್ಯ ರಚಿಸಿ ನಿಗದಿಪಡಿಸಿರುವುದು ಸ್ತುತ್ಯಾರ್ಹ. ಇದು ಯಾವುದೇ ಆರೋಗ್ಯಕರ ಸಮಾಜದ ಸರ್ವಾಂಗೀಣತೆಯ ವಿಕಾಸತಾ ಫಲವೇ ಆಗಿದೆ. ಪ್ರಕೃತ ನೆಲೆಯಲ್ಲಿ ರೂಪುಗೊಳ್ಳುವ ಸಿದ್ಧತಾ ಶೈಕ್ಷಣಿಕ ಸತ್ವಯುತ ಯೋಜನೆ, ದಿಟ್ಟ ನಿಲುವು ಇಲ್ಲವೇ ನಡೆಸುವ ಸಾಮೂಹಿಕ ಪ್ರಯತ್ನಗಳು ಶ್ರೀಸಾಮಾನ್ಯರೆಲ್ಲರ ಅಭ್ಯುದಯದ ಆಶಯವಾಗಿದೆ. ನಿರಂತರ ವಸ್ತುನಿಷ್ಠ ಯತ್ನ, ಕ್ರಮಬದ್ಧನಿಯಮಾನುಸಾರ ಯೋಜನೆ, ಚೇತೋಹಾರಿ ನಿಶ್ಚಯ, ಪ್ರಸ್ತುತತೆ ಹಾಗೂ ಕಾಲಧರ್ಮ ಸಮನ್ವಯತೆಗೆ ಅನುವಾದ ವೈಜ್ಞಾನಿಕ ಶೈಕ್ಷಣಿಕ ವಿನ್ಯಾಸವೇ ವ್ಯಕ್ತಿತ್ವ ವಿಕಸನದ ಬಿಂಬ. ಇಂದು ಶಿಕ್ಷಣ ನಮ್ಮ ನಿಮ್ಮೆಲ್ಲರ ಯಶೋ ಸಿದ್ಧಿಯ ಮೆಟ್ಟಿಲು. ಅದೇ ಶೈಕ್ಷಣಿಕ ಧರ್ಮ.

ಕಲಿ ಕನ್ನಡ–೨ ಪಠ್ಯ ಸಂರಚನಾ ಅವತರಣಿಕೆ ಮೂಲಭೂತ ಭಾಷಾ ಕಲಿಕಾ ಕೌಶಲಗಳ ತಾಂತ್ರಿಕತೆ ಹಾಗೂ ಭಾಷಾವೈಜ್ಞಾನಿಕ ವಿನ್ಯಾಸ ವಿನೂತನತೆಯನ್ನು ಆಧರಿಸಿದೆ. ಮುಖ್ಯವಾಗಿ ಆಲಿಕೆ, ಪರಿಕಲ್ಪಿತ ವಿಷಯದ ಅರಿವು, ಭಾವಾರ್ಥ ಅಭಿವ್ಯಕ್ತಿ, ಗುರುತಿಸಿ–ತಿಳಿ, ಬರೆಹ, ಅನುಕರಣ ನಿರಂತರತೆ, ಪ್ರಾಯೋಗಿಕ ಅನ್ವಯಿಕಾ ಪರಿಚಯ ಭಾಷಾ ಕಲಿಕಾ ಮೆಟ್ಟಿಲುಗಳು. ಪ್ರಸ್ತುತ ಕಲಿ ಕನ್ನಡ–೨ ಪಠ್ಯಪುಸ್ತಕದ ನಿರೂಪಣಾ ವಿವರಣಾತ್ಮಕ ಕಲಿಕಾ ಅನುಕ್ರಮಣಿಕೆ ಇಂತಿದೆ:

**ಭಾಗ – ೧ ಪೂರ್ವಸಿದ್ಧತಾ ಸೇತುಬಂಧ ಬೋಧನಾ ಪಾಠಗಳು** (ಬೋಧನೆಯ ವಾಚನ/ಓದು ಪರಿಕರಗಳು)
**ಭಾಗ – ೨ ಅಕ್ಷರ ಕಲಿಕಾ ಪಾಠಗಳು** (ಬೋಧನಾ ಕಲಿಕಾ ಪಾಠ ಪರಿಕರಗಳು)

⋆ ಮೂಲ ಅಕ್ಷರ ಕಲಿಕಾ ಪಾಠಗಳು ⋆ ಗುಣಿತ ಅಕ್ಷರ ಕಲಿಕಾಪಾಠಗಳು

– ಇವೆಲ್ಲವೂ ಪ್ರಕೃತ ಕಲಿಕಾ ಪಠ್ಯದ ಕ್ರಿಯಾತ್ಮಕತೆಯ ಪ್ರಣಾಳಿಕೆಗಳು.

ಭಾಗ–೧ ಪೂರ್ವಸಿದ್ಧತಾ ಸೇತುಬಂಧ ಬೋಧನಾ ಪಾಠಗಳು (ಬೋಧನೆಯ ವಾಚನ/ಓದು ಪರಿಕರಗಳು): ಇಲ್ಲಿ ಒಟ್ಟು ಹತ್ತು ಪದ್ಯ–ಗದ್ಯ ಮಿಶ್ರಿತ ಪಾಠಗಳನ್ನು ನಿಗದಿಪಡಿಸಿದೆ. ಕಲಿಕಾರ್ಥಿಗಳ ಪೂರ್ವ ತರಗತಿಯ ಕಲಿಕಾಂಶಗಳನ್ನು ನೆನಪಿಸಿಕೊಂಡು ಸ್ಥಿರೀಕರಿಸುವ ಉದ್ದೇಶದ ನಮೂದುಗಳವು. ಪ್ರಕೃತ ನಿಗದಿತ ಪಾಠಗಳು ಶ್ರವಣಾತ್ಮಕತೆಯಿಂದ ಧ್ವನಿ ಪ್ರಮಾಣೀಕರಣವನ್ನು ನಿಶ್ಚಿತಗೊಳಿಸುವ ಗುರಿವುಳ್ಳವುಗಳು. ಅಲ್ಲದೇ ರಾಗಲಯಾತ್ಮಕತೆಯಿಂದ ಹಾಡಬಲ್ಲ ಪದ್ಯ, ಕುತೂಹಲ ರೋಚಕ ಕಥನಾತ್ಮಕತೆಯ ಗದ್ಯಗಳವು. ಹಾಗಾಗಿ ಮಗುವಿನ ಕಲಿಕೆಗೆ ಸೇತುವಾಗಿಸುವ, ಸುಲಭ ಎನಿಸುವ ಬೋಧನಾ ಪರಿಕರಗಳವು. ಸ್ವತಂತ್ರ, ಸ್ವಪೇಕ್ಷ, ಸ್ವಗ್ರಹಿಕೆಯ ಹಾಗೂ ಸ್ವ ಅಭಿವ್ಯಕ್ತಿಯ ಸಂಪನ್ನತಾ ಮೌಲಿಕ ತುಣುಕುಗಳವು. ಕಲಿಕಾರ್ಥಿಯ ಪೂರ್ವಭಾವಿ ಗ್ರಹಿಕಾ ಹಾಗೂ ಅರ್ಥೈಸಿ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಗಮನಾರ್ಹ ರೀತಿಯಲ್ಲಿ ಶೀಲಗೊಳಿಸುವ ಪ್ರಾಮಾಣಿಕ ಪ್ರಯತ್ನ ಇಲ್ಲಿನದು. ಮಗುವಿನ ನಿರ್ಣಾಯಕಕ್ಕೆ ಸಿಂಧುತ್ವ ಅಗತ್ಯವಿದ್ದು ಅದಕ್ಕೆ ಆದ್ಯತೆ ನೀಡುವ ಪರಿ ಗಮನಾರ್ಹ. ಅದಕ್ಕಾಗಿ ಪರಿಚಿತ ಕವಿತೆ ಹಾಗೂ ಕಿರು ಕಥೆಗಳ ನೆಲೆ ಅರ್ಥಪೂರ್ಣವಾಗಿದೆ. ಔಪಚಾರಿಕ ಕಲಿಕೆಗೆ ಭೂಮಿಕೆ ಇದು.

ಭಾಗ–೨ ಅಕ್ಷರ ಕಲಿಕಾ ಪಾಠಗಳು (ಬೋಧನಾ ಕಲಿಕಾ ಪಾಠ ಪರಿಕರಗಳು) ಭಾಗದಲ್ಲಿ ಕನ್ನಡ ವರ್ಣಮಾಲಾ ಅಕ್ಷರಗಳನ್ನು ಮುಖ್ಯವಾಗಿ ಮೂರು ನೆಲೆಗಳಲ್ಲಿ ಕಲಿಸುವ ಸರಳ ವೈಜ್ಞಾನಿಕ ವರ್ಗೀಕೃತ ಪಾಠಗಳಿವೆ. ಭಾಷಾವೈಜ್ಞಾನಿಕ ಹಾಗೂ ಶೈಕ್ಷಣಿಕ ತಾತ್ವಿಕತೆ, ಅನ್ವಯ ಹಾಗೂ ಪ್ರಾಯೋಗಿಕ ಆಧಾರಿತ ಪಾಠಗಳವು. ಮೊದಲು ಕನ್ನಡ ವರ್ಣಮಾಲೆಯ ಮೂಲಾಕ್ಷರಗಳನ್ನು ಕಲಿಸುವ ಹನ್ನೊಂದು ಭಾಷಿಕ ಕೌಶಲ, ಪ್ರಾಯೋಗಿಕ ಚಟುವಟಿಕಾ

© KTBS Not to be republished

ಪಾಠಗಳಿವೆ. ಅಕ್ಷರ ಸ್ವರೂಪ ಸಾಮ್ಯತೆ, ಅರ್ಥವತ್ತಾದ ಪದ ನಿರ್ಮಿತಿಯ ನೆಲೆ, ಸುಲಭ ರೀತಿಯ ಪದಗ್ರಹಿಕಾ ಕ್ರಮಾನುಸಾರದ ಪಾಠಗಳವು. ಅಕ್ಷರ ಸಾಮ್ಯತೆ ಒಂದೇ ಇಲ್ಲಿನ ಪ್ರಮಾಣವಲ್ಲ. ಜತೆಗೆ ಕನಿಷ್ಠತಮ ಅರ್ಥವನ್ನು ನೀಡಬಲ್ಲ ಪದ ತಯಾರಿ ಮತ್ತು ಜನಪ್ರಿಯ ಭಾಷಿಕ ಅರ್ಥ ಇವುಗಳ ಮೂಲೋದ್ದೇಶ. ರ ಗ ಸ ದ ಅ ಅಕ್ಷರ ಅನುಕ್ರಮಣಿಕೆಯ......... ಅಂ ಅಃ ಜ ಇ – ಅಕ್ಷರ ಪಾಠಗಳವು. ಅಕ್ಷರ ಸಂಬಂಧೀ ಪಾಠದಿಂದ ಭಾಷೆಯ ಉಚ್ಚಾರಣಾ ಸಮರ್ಪಕತೆಯನ್ನು ಪದಗಳ ಪಟ್ಟಿಕೆಯ ಮೂಲಕ ಸರಿಪಡಿಸುವ ಉದ್ದೇಶವೇ ಇಲ್ಲಿನದು. ಅಲ್ಲದೇ ಬರೆಹ ಉದ್ದೀಪನತೆಯೂ ಮುಖ್ಯ. ವಿವಿಧ ರೀತಿಯ ಅಭ್ಯಾಸ ಚಟುವಟಿಕೆ ಕಲಿವಿನ ನಿಶ್ಚಿತತೆ, ಸ್ಪಷ್ಟತೆ, ದೃಢತ್ವ ಇತ್ಯಾದಿ ಕಲಿಕಾಂಶಗಳ ತಾತ್ವಿಕತೆಯನ್ನು ಅನ್ವಯಿಸಿದೆ. ಅನೌಪಚಾರಿಕ ಸಂದರ್ಭದ ಕನ್ನಡ ನುಡಿಯ ದನಿಗಳನ್ನು ಕ್ರಿಯಾತ್ಮಕವಾಗಿ ಸಕ್ರಿಯಗೊಳಿಸಿದೆ. ಧ್ವನಿಮಾಲೆಯ ಯಾವುದೇ ದನಿಗಳನ್ನು ಕೈಬಿಡದೆ ಹೆಚ್ಚು ಪ್ರಧಾನತೆ ಮತ್ತು ಜನಪ್ರಿಯತೆಯನ್ನು ಪಡೆದ ದನಿಗಳಿಗೆ ಆದ್ಯತೆ ನೀಡಿ ಪದ ತಯಾರಿಯ ಚಾಲನೆಯನ್ನು ನೀಡಿದೆ. ಅಕ್ಷರ ಸಂಯೋಜನೆ, ಅಕ್ಷರಗುಚ್ಛತಾ ಅಂಶಗಳನ್ನು ಪ್ರತ್ಯೇಕ ಪಾಠಗಳ ನೆಲೆಯಲ್ಲಿ ನೀಡಿದೆ. ಎರಡನೆಯದೇ ಗುಣಿತ ಅಕ್ಷರ ಕಲಿಕಾ ಪಾಠಗಳ ಭಾಗ. ಇಲ್ಲಿ ಎರಡು ಗುಣಿತ ಅಕ್ಷರ ಪಾಠಗಳಿವೆ. ಪದ ರಚನೆಯ ಮೂಲ ತಾತ್ವಿಕತೆಯನ್ನು ಗಂಭೀರವಾಗಿ ಪರಿಗಣಿಸಿದ ತಾಣವದು. ವ್ಯಂಜನ ಸ್ವರಸಂಯೋಜನೆಯ ಭಾಷಿಕತೆಯನ್ನು ಮನನ ಮಾಡಿಕೊಡುವ ಸಲುವಾಗಿ ಅಕ್ಷರ ಓದಿನೊಂದಿಗೆ ಚಿತ್ರ ನೋಡಿ ಪದ ಹೇಳುವ ಸ್ವರೂಪದ ಪಾಠಗಳವು. ಪದರಚನೆಯ ಹೆಚ್ಚಳಿಕೆಗೆ ವಾಸ್ತವ ನಿದರ್ಶನವಿದು. ವೈವಿಧ್ಯಪೂರ್ಣ ಪದನಿರ್ಮಾಣ ಸೂಕ್ತ ಮತ್ತು ಸಮಂಜಸ.

ಕಲಿಕಾಂಶಗಳ ಸಮರ್ಪಕ ಮೌಲ್ಯಮಾಪನ ಸ್ಥರಗಳೇ ಅಲ್ಲಲ್ಲಿ ನಿಶ್ಚಿತಗೊಳಿಸಿರುವ **'ನನ್ನಸಾಧನೆ'** ಎಂಬುದು. ಅಲ್ಲಿ ಕಲಿಕಾರ್ಥಿಯ ಕಲಿವಿನ ಪುನಾಮನನ, ದೃಢೀಕರಣ ಮತ್ತು ಸಫಲ ಗ್ರಹಿಕಾ ನಿರ್ಧಾರತೆಯೇ ಪ್ರಧಾನಾಂಶ. ಅದಕ್ಕಾಗಿ ಸೂಕ್ತ ಅಭ್ಯಾಸ ಚಟುವಟಿಕೆಯನ್ನು ಅಳವಡಿಸಿದೆ. ಬಿಟ್ಟ ಜಾಗವನ್ನು ಸೂಕ್ತ ಅಕ್ಷರ/ಪದದಿಂದ ತುಂಬುವಿಕೆ, ಬಿಟ್ಟ ಜಾಗವನ್ನು ಸೂಕ್ತ ಅಕ್ಷರವನ್ನು ಆರಿಸಿ ಅರ್ಥಪೂರ್ಣ ಪದಕಟ್ಟುವಿಕೆ, ಸೂಕ್ತ ಅಕ್ಷರ ಸಂಯೋಜನೆ/ಜೋಡಣೆ ಪದ ರಚನೆ.............. ಹೀಗೆ ಹಲವು ಪ್ರಾಯೋಗಿಕ ಅಭ್ಯಾಸ ಚಟುವಟಿಕೆಯನ್ನು ಕೊಟ್ಟಿದೆ. ಅದು ಕಲಿತ ಕಲಿಯುವ ಭಾಷಿಕಾಂಶಗಳಿಗೆ ಇಂಬುಕೊಡುವುದು. ಅಂತೆಯೇ ಬರೆಹದ ಚಾಕ್ಷುಷ ಸ್ವಚ್ಛತೆಗೆ ಅವಕಾಶವನ್ನು ನೀಡಿದೆ. ಮಗು ಕುತೂಹಲದಿ ನಮೂದಿಸಿರುವ ಚಟುವಟಿಕೆಯನ್ನು ಗಂಭೀರವಾಗಿ ಗಮನಿಸಿ ಕಲ್ಪಿತ ಕ್ರಿಯಾತ್ಮಕತೆಗೆ ಅವಕಾಶ ಇಲ್ಲಿದೆ. ಸ್ವ ಆಲೋಚನೆಯಿಂದ ಮಕ್ಕಳು ಮಾಡಬಹುದಾದ ಸೃಜನಾತ್ಮಕ ಚಟುವಟಿಕಾ ಭಾಗವಿದು. ಕಲಿಕೆಗೆ ಖಚಿತತೆಯನ್ನು ಸಮನ್ವಯಗೊಳಿಸುವ ಚಟುವಟಿಕೆಗಳ ಅನುಸಂಧಾನತೆ ಇಲ್ಲಿನದು. ನಿರ್ವಹಿತ ಚಟುವಟಿಕೆ ಮಗುವಿನ ಭಾವ ವಿಸ್ತಾರಕ್ಕೆ ಸದೃಶವಾಗಿದೆ. ಪ್ರಾಯೋಗಿಕತ್ವ ಭಾವ ಪರಿಕಲ್ಪನೆಗೆ ಹೊಂದಿಕೊಂಡಿದೆ.

ಸ್ವಚ್ಛಂದತೆಯ ಹಿನ್ನೆಲೆಯೇ ಪರಿಚಯ ಭಾಷೆ ಕನ್ನಡದ ಕಲಿಕಾ ನಿರ್ಬಂಧ. ಪರಿಚಿತ ಭಾಷೆಯಾಗಿ ಕನ್ನಡದ ಮೂಲಭೂತ ಕಲಿಕಾ ಕೌಶಲಗಳನ್ನು ಭಾಷಾವೈಜ್ಞಾನಿಕ ಪರಿಧಿಯಲ್ಲಿ ಸೂತ್ರೀಕರಿಸಿದ ನಿಯೋಜನೆಯೇ ಇದರ ಆಂತರ್ಯದ ಗುಟ್ಟು. ಅನ್ಯ ಭಾಷಿಕರಿಗೆ ಇಲ್ಲವೇ ಇಂಗ್ಲಿಶ್ ಮಾಧ್ಯಮ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ಸಲುವಾಗಿ ಯೋಜಿತವಾದ ಚಿತ್ರ ಸಹಿತ ಬರೆಹದ ಶಾಲಾ ಪಠ್ಯವೇ ಕಲಿ ಕನ್ನಡ–೨. ಇದರಲ್ಲಿ ನೀಡಿರುವ ಕಲಿಕೋದ್ದೇಶದ ಚಿತ್ರ, ಚಿತ್ರಸರಣಿ, ಚಿತ್ರ ಸಂಯೋಜನಾ ಗುಚ್ಛವೇ ಪರಿಚಿತ ಭಾಷೆ ಕನ್ನಡದ ಕಲಿಸುವಿಕೆಯ ಅಂತಿಮ ನೆಲೆಗಳೆಂದು ಭಾವಿಸದೆ ಶಿಕ್ಷಕ/ಶಿಕ್ಷಕಿಯರು ಬಹು ಆಯಾಮಗಳಲ್ಲಿರುವ ಅಗತ್ಯತೆ, ಸೂಕ್ತ ಮಾಹಿತಿ ಹಾಗೂ ವಿಧಾನಗಳನ್ನು ಬಳಸಿ ವ್ಯವಸ್ಥಿತವಾಗಿ ಸಂತಸಭರಿತ ರೀತಿಯಲ್ಲಿ ಕಲಿಸಲೆಂಬುದೇ ದೃಢಭಾವ.

ಪರಿಚಯ ಭಾಷೆ ಕಲಿ ಕನ್ನಡ–೨ ಪುಸ್ತಕದ ಸಂಯೋಜನಾ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ನೆರವಾದ ರಚನಾ ಸಮಿತಿಯ ಎಲ್ಲಾ ಸನ್ಮಿತ್ರ ಬೋಧಕ ಸದಸ್ಯರು ಮತ್ತು ಕಲಾವಿದರ ಸಹಕಾರ, ಬೆಂಬಲ, ಆತ್ಮೀಯತೆ, ವಿಶ್ವಾಸ, ಹೃದಯಶ್ರೀಮಂತಿಕೆಯನ್ನು ಗೌರವದಿ ನೆನೆಯುವೆ. ಡಿ.ಎಸ್.ಇ.ಆರ್.ಟಿ. ನಿರ್ದೇಶಕರ ಸಮಯೋಚಿತ ಸಲಹೆ, ಮಾರ್ಗದರ್ಶನ ಮಹತ್ವದ್ದು. ಇವರ ಕಾಳಜಿ ಮತ್ತು ವಿಶ್ವಾಸಪೂರ್ವಕ ಅಭಿಮಾನ ವಿಶೇಷ. ಸಹನಿರ್ದೇಶಕರು, ಉಪನಿರ್ದೇಶಕರು ಹಾಗೂ ಹಿರಿಯ ಸಹಾಯಕ ನಿರ್ದೇಶಕರು ನಮ್ಮೀ ಕೆಲಸ ಕಾರ್ಯಗಳನ್ನು ಅಭಿಮಾನದಿ ವಿಚಾರಿಸುತ್ತಾ ಸಲಹೆ ಸೂಚನೆಗಳನ್ನು ಇತ್ತು ಸಹಾನುಭೂತಿಯಿಂದ ಕೆಲಸವನ್ನು ಸಮ್ಮತಿಸಿ ಪಠ್ಯ ಸಂರಚನಾ ಯೋಜನೆಯ ಯಶಸ್ಸಿಗೆ ಸಹಕರಿಸಿದ ಅವರೆಲ್ಲರಿಗೂ ಸಮಿತಿಯ ಪರವಾಗಿ ಗೌರವಪೂರ್ವಕ ವಂದನೆಗಳು.

**ಡಾ. ಸಿ.ಎಸ್. ರಾಮಚಂದ್ರ**
ಅಧ್ಯಕ್ಷ
ಕಲಿ ಕನ್ನಡ–೨ ಪಠ್ಯಪುಸ್ತಕ ರಚನಾ ಸಮಿತಿ

© KTBS Not to be republished

# ಕಲಿಕಾ ಅನುಕ್ರಮಣಿಕೆ

## ಭಾಗ – ೧


| | | | |
|---|---|---|---|
| **✤ ಪೂರ್ವಸಿದ್ಧತಾ ಸೇತುಬಂಧ ಬೋಧನಾ ಪಾಠಗಳು** (ಬೋಧನೆಯ ವಾಚನ/ಓದು ಪರಿಕರಗಳು) | | | ಪುಟ ಸಂಖ್ಯೆ |
| • ಪದ್ಯಪಾಠ – ೧ | ಚಂದಮಾಮ | – | ೧ |
| • ಪದ್ಯಪಾಠ – ೨ | ನಮ್ಮ ಬಾವುಟ | – | ೨ |
| • ಗದ್ಯಪಾಠ – ೩ | ಹೋತನ ಜಾಣತನ | – | ೩ |
| • ಗದ್ಯಪಾಠ – ೪ | ಗುಬ್ಬಚ್ಚಿ ಮತ್ತು ಮರಿಗಳು | – | ೫ |
| • ಪದ್ಯಪಾಠ – ೫ | ಸುಗ್ಗಿ | – | ೬ |
| • ಪದ್ಯಪಾಠ – ೬ | ಕಾಮನಬಿಲ್ಲು ಕಮಾನುಕಟ್ಟಿದೆ | – | ೭ |
| • ಪದ್ಯಪಾಠ – ೭ | ಇಳೆಗೆ ಬಂತು ಮಳೆ | – | ೮ |
| • ಗದ್ಯಪಾಠ – ೮ | ಮಂತ್ರಿಯ ಜಾಣ್ಮೆ | – | ೯ |
| • ಗದ್ಯಪಾಠ – ೯ | ರಾಮಕೃಷ್ಣನ ಬೆಕ್ಕು | – | ೧೦ |
| • ಗದ್ಯಪಾಠ – ೧೦ | ದುರಾಸೆಯ ಫಲ | – | ೧೧ |


## ಭಾಗ–೨


| | | | |
|---|---|---|---|
| **✤ ಅಕ್ಷರ ಕಲಿಕಾ ಪಾಠಗಳು** (ಬೋಧನಾ ಕಲಿಕಾ ಪಾಠ ಪರಿಕರಗಳು) | | | |
| **• ಮೂಲ ಅಕ್ಷರ ಕಲಿಕಾ ಪಾಠಗಳು** | | | |
| • ಪಾಠ – ೧ | ರ ಗ ಸ ದ ಅ ಅಕ್ಷರ ಪಾಠ | – | ೧೪ |
| • ಪಾಠ – ೨ | ಜ ಉ ಮ ಬ ನ ಅಕ್ಷರ ಪಾಠ | – | ೧೮ |
| • ಪಾಠ – ೩ | ಪ ಯ ವ ಟ ಚ ಅಕ್ಷರ ಪಾಠ | – | ೨೩ |
| ➢ ನನ್ನ ಸಾಧನೆ – ೧ | | – | ೨೮ |
| • ಪಾಠ – ೪ | ಲ ಡ ಇ ಊ ಕ ಅಕ್ಷರ ಪಾಠ | – | ೩೦ |
| • ಪಾಠ – ೫ | ಎ ಏ ಐ ತ ಳ ಅಕ್ಷರ ಪಾಠ | – | ೩೫ |
| • ಪಾಠ – ೬ | ಆ ಈ ಓ ಣ ಅಕ್ಷರ ಪಾಠ | – | ೪೦ |
| ➢ ನನ್ನ ಸಾಧನೆ – ೨ | | – | ೪೪ |
| • ಪಾಠ – ೭ | ಒ ಹ ಔ ಛ ಅಕ್ಷರ ಪಾಠ | – | ೪೬ |
| • ಪಾಠ – ೮ | ಧ ಥ ಢ ಭ ಅಕ್ಷರ ಪಾಠ | – | ೫೦ |
| • ಪಾಠ – ೯ | ಠ ಘ ಫ ಝ ಅಕ್ಷರ ಪಾಠ | – | ೫೫ |
| • ಪಾಠ – ೧೦ | ಖ ಋ ಶ ಷ ಅಕ್ಷರ ಪಾಠ | – | ೬೧ |
| • ಪಾಠ – ೧೧ | ಅಂ ಅಃ ಙ ಞ ಅಕ್ಷರ ಪಾಠ | – | ೬೬ |
| ➢ ನನ್ನ ಸಾಧನೆ – ೩ | | – | ೭೦ |
| **• ಗುಣಿತ ಅಕ್ಷರ ಕಲಿಕಾ ಪಾಠಗಳು** | | | |
| • ಪಾಠ – ೧ | ಅಕ್ಷರಗಳನ್ನು ಓದಿಸಿ • ಚಿತ್ರ ತೋರಿಸಿ ಪದಹೇಳಿಸಿ | – | ೭೪ |
| • ಪಾಠ – ೨ | ಅಕ್ಷರಗಳನ್ನು ಓದಿಸಿ • ಚಿತ್ರ ತೋರಿಸಿ ಪದಹೇಳಿಸಿ | – | ೮೦ |
| ➢ ನನ್ನ ಸಾಧನೆ – ೪ | | – | ೯೫ |


©KTBS Not to be republished

# ಭಾಗ – ೧

## ಪೂರ್ವಸಿದ್ಧತಾ ಸೇತುಬಂಧ ಪಾಠಗಳು

### (ಬೋಧನೆಯ ವಾಚನ / ಓದು ಪರಿಕರಗಳು)

### ಪದ್ಯಪಾಠ – ೧

## ಚಂದಮಾಮ

(ಈ ಪದ್ಯವನ್ನು ರಾಗವಾಗಿ ಹಾಡಿ ಮಕ್ಕಳಿಂದ ಹಾಡಿಸಿ)

**ಚಂದಮಾಮ ಬಾರಯ್ಯ**
ನಮ್ಮ ಮನೆಗೆ ಬಾರಯ್ಯ
ಹಾಲು ಸಕ್ಕರೆ ಕೂಡಿಸಿ ಕೊಡುವೆ
ಕುಡಿಯಲು ಬೆಳ್ಳಿಯ ಬಟ್ಟಲು ಕೊಡುವೆ ॥ ಚಂದಮಾಮ ॥



ಸಕ್ಕರೆ ಕಡ್ಡಿ ತರ್ತೀನಿ
ಮಿಕ್ಕರೆ ನಿನಗೂ ಕೊಡ್ತೀನಿ
ಇಬ್ಬರು ಸೇರಿ ತಿನ್ನೋಣ
ಇಬ್ಬರು ಕೂಡಿ ಆಡೋಣ ॥ ಚಂದಮಾಮ ॥


ಎಲ್ಲಿಗೋದ್ರು ಬರ್ತೀಯ
ಅಲ್ಲೇ ದೂರದಲ್ಲಿರ್ತೀಯ
ಹಿಂದೆ ಹಿಂದೆ ಬರ್ತೀಯ
ಎಲ್ಲಂದ್ರಲ್ಲೇ ನಿಲ್ತೀಯ ॥ ಚಂದಮಾಮ ॥

©KTBS Not to be republished

## ಪದ್ಯಪಾಠ – ೨

# ನಮ್ಮ ಬಾವುಟ

(ಈ ಪದ್ಯವನ್ನು ರಾಗವಾಗಿ ಹಾಡಿ ಮಕ್ಕಳಿಂದ ಹಾಡಿಸಿ)



ಏರುತಿಹುದು ಹಾರುತಿಹುದು
ನೋಡು ನಮ್ಮ ಬಾವುಟ
ತೋರುತಿಹುದು ಹೊಡೆದು ಹೊಡೆದು
ಬಾನಿನಗಲ ಪಟಪಟ ॥ ೧ ॥

ಕೇಸರಿ ಬಿಳಿ ಹಸಿರು ಮೂರು
ಬಣ್ಣ ನಡುವೆ ಚಕ್ರವು
ಸತ್ಯ ಶಾಂತಿ ತ್ಯಾಗ ಮೂರ್ತಿ
ಗಾಂಧಿ ಹಿಡಿದ ಚರಕವು ॥ ೨ ॥

ಇಂತ ಧ್ವಜವು ನಮ್ಮ ಧ್ವಜವು
ನೋಡು ಹಾರುತಿರುವುದು
ಧ್ವಜದ ಭಕ್ತಿ ನಮ್ಮ ಶಕ್ತಿ
ನಾಡ ಗುಡಿಯ ಮೆರೆವುದು ॥ ೩ ॥

ಕೆಂಪು ಕಿರಣ ತುಂಬಿ ಗಗನ
ಹೊನ್ನ ಬಣ್ಣವಾಗಿದೆ
ನಮ್ಮ ನಾಡ ಗುಡಿಯ ನೋಡ
ನೋಡಿರಣ್ಣ ಹೇಗಿದೆ ॥ ೪ ॥

–ಕಯ್ಯಾರ ಕಿಞ್ಞಣ್ಣ ರೈ

©KTBS
Not to be republished

ಗದ್ಯಪಾಠ – ೩

# ಹೋತನ ಜಾಣತನ

[ಕಥೆಯನ್ನು ಓದಿ ಹೇಳಿ]

ಒಂದು ಗುಡ್ಡದ ತಪ್ಪಲಿನಲ್ಲಿ ಹೋತವೊಂದು ತನ್ನಷ್ಟಕ್ಕೆ ತಾನು ಹುಲ್ಲು ಮೇಯುತ್ತಿತ್ತು. ಇದಕ್ಕಿದ್ದಂತೆ ಅದರ ಬೆನ್ನ ಹಿಂದೆ ಏನೋ ಸದ್ದು ಆಯಿತು. ಆಗ ಹೋತ ತಿರುಗಿ ನೋಡಿತು. ಅಲ್ಲೊಂದು ತೋಳ ನಿಂತಿತ್ತು. ಅದು ಇನ್ನೇನು ಹೋತನ ಮೇಲೆ ಹಾರಲು ಸಿದ್ಧವಾಗಿತ್ತು.

ಹೋತಕ್ಕೆ ಬಹಳ ಹೆದರಿಕೆಯಾಯಿತು. ಆದರೆ ಹೇಗಿದ್ದರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇನ್ನು ಬುದ್ಧಿವಂತಿಕೆಯಿಂದ ಮಾತ್ರ ಜೀವ ಉಳಿಸಿಕೊಳ್ಳಬಹುದು ಎಂದು ಯೋಚಿಸಿದ ಹೋತ ಹುಲ್ಲು ಮೇಯುವುದನ್ನು ಮುಂದುವರೆಸಿತು. ತೋಳ ಎಷ್ಟೇ ಹತ್ತಿರ ಬಂದರೂ ಅದರ ಕಡೆಗೆ ಮುಖ ತಿರುಗಿಸಿಯೂ ನೋಡಲಿಲ್ಲ. ಇದರಿಂದ ತೋಳಕ್ಕೆ ಸ್ವಲ್ಪ ಸಂಶಯವಾಯಿತು. ಅದು ಈವರೆಗೆ ಹೋತವನ್ನು ಕಂಡಿರಲಿಲ್ಲ. ಆದ್ದ-ರಿಂದ ಈ ಪ್ರಾಣಿಯ ಪರಿಚಯವನ್ನು ಮೊದಲು ಮಾಡಿಕೊಂಡು ಆನಂತರ ಅದನ್ನು ಕೊಲ್ಲುವುದು ಸೂಕ್ತವೆಂದು ತೋಳ ಯೋಚಿಸಿತು.

ಅದು ಹೋತದ ಬಳಿಗೆ ಬಂದು "ನೀನು ಯಾರು ?" ಎಂದು ಪ್ರಶ್ನಿಸಿತು.

ಹೋತ ತಲೆಯನ್ನು ಮೇಲೆತ್ತದೆ "ನನ್ನ ಹೆಸರನ್ನು ಕೇಳಿಲ್ಲವೆ ನೀನು? ನಾನು ಬೆಟ್ಟದ ಹೋತ" ಎಂದಿತು.

ಹೋತನ ಕೊಂಬನ್ನು ತೋರಿಸಿ ತೋಳ "ಅದೇನು ?" ಎಂದು ಕೇಳಿತು.

"ಅದು ನನ್ನ ಕತ್ತಿ" ಎಂದಿತು ಹೋತ.

ಹೋತದ ಬಾಲವನ್ನು ತೋರಿಸಿ ತೋಳ "ಅದೇನು ?" ಎಂದು ಪ್ರಶ್ನಿಸಿತು.

"ನನ್ನ ಶತ್ರುವನ್ನು ಹಿಡಿಯಲು ಇರುವ ಹಗ್ಗ ಇದು" ಎಂದಿತು ಹೋತ.

ಹೋತದ ಗಡ್ಡವನ್ನು ತೋರಿಸಿ ತೋಳ "ಅದೇನು ?" ಎಂದಿತು.

"ನನಗೆ ಇಷ್ಟವಾದ ಕರಡಿಯ ಕೊಬ್ಬನ್ನು ತಿಂದ ಮೇಲೆ ಮುಖ ಒರೆಸಿಕೊಳ್ಳಲು ಇರುವ ಬಟ್ಟೆ ಇದು" ಎಂದಿತು ಹೋತ.

© KTBS Not to be republished

ಇದನ್ನು ಕೇಳಿದ ತೋಳ ಹೆದರಿ, ಓಡಿ ಕಾಡನ್ನು ಸೇರಿತು. ಅಲ್ಲಿ ಅದಕ್ಕೆ ಒಂದು ನರಿ ಎದುರಾಯಿತು.

"ಏಕೆ ತೋಳಣ್ಣಾ, ಹೀಗೆ ಹೆದರಿ ಕಂಗಾಲಾಗಿ ಓಡಿ ಹೋಗುತ್ತಿದ್ದೀಯಲ್ಲ?" ಎಂದು ನರಿ ಕೇಳಿತು.

ತೋಳ ನಡೆದ ಘಟನೆಯನ್ನು ಹೇಳಿತು. ಎಷ್ಟೋ ಹೋತಗಳನ್ನು ಕಂಡಿದ್ದ ನರಿ ನಗುತ್ತ,

"ಅಯ್ಯೋ! ನೀನು ಒಂದು ಹೋತಕ್ಕೆ ಹೆದರಿ ಓಡಿ ಹೋಗುತ್ತಿರುವೆಯಲ್ಲ? ಬಾ ಅದನ್ನು ಕೊಂದು ಇಬ್ಬರೂ ತಿನ್ನೋಣ" ಎಂದಿತು.

ತೋಳವನ್ನು ಉಪಾಯದಿಂದ ಓಡಿಸಿದೆನೆಂದು ಹೋತ ಸಂತೋಷಗೊಂಡು ಮತ್ತೆ ಹುಲ್ಲು ಮೇಯುತ್ತಿರುವಾಗ ಎದುರಿಗೆ ನರಿಯೊಂದಿಗೆ ತೋಳ ಬರುತ್ತಿರುವುದು ಕಂಡಿತು.

ಈ ಸಲವಂತೂ ಹೋತಕ್ಕೆ ಬಹಳ ಹೆದರಿಕೆಯಾಯಿತು. ಆದರೆ ಓಡಿ ಹೋದರೆ ಪ್ರಾಣಕ್ಕೆ ಸಂಚಕಾರ ಬರುವ ಸಂಭವವಿತ್ತು.

ಆದ್ದರಿಂದ ಅದು ಈಗಲೂ ಉಪಾಯವಾಗಿ ತಪ್ಪಿಸಿಕೊಳ್ಳಲು ಯೋಚಿಸಿತು.

ನರಿ ಮತ್ತು ತೋಳ ಹತ್ತಿರ ಬಂದ ಕೂಡಲೆ ಹೋತ ಅವುಗಳನ್ನು ಸ್ವಾಗತಿಸಿ,

"ನರಿಯಣ್ಣ ನೀನು ನಿಜಕ್ಕೂ ಒಳ್ಳೆಯ ಸ್ನೇಹಿತ. ನೀನು ಕೊಟ್ಟ ಮಾತಿನಂತೆ ತೋಳವನ್ನು ಹಿಡಿದು ತಂದೆಯಲ್ಲ ! ತೋಳದ ಮಾಂಸ ಎಷ್ಟು ರುಚಿಕರವಾಗಿರುತ್ತದೆ ಅಲ್ಲವೆ ? ಬಾ ಇಬ್ಬರೂ ಸೇರಿ ತೋಳವನ್ನು ತಿನ್ನೋಣ" ಎಂದಿತು.

ಇದನ್ನು ಕೇಳಿದ್ದೇ ತಡ, ತೋಳ ಮಿಂಚಿನಂತೆ ಓಡಿ ಕಾಡು ಸೇರಿತು.

–ಮನಿಯಾಲ್ ಗಣೇಶ್ ಶೆಣೈ

©KTBS Not to be republished

## ಗದ್ಯಪಾಠ – ೪

# ಗುಬ್ಬಚ್ಚಿ ಮತ್ತು ಮರಿಗಳು

[ಕಥೆಯನ್ನು ಓದಿ ಹೇಳಿ]



ಜೋಳದ ಹೊಲದಲ್ಲಿ ಗುಬ್ಬಚ್ಚಿಯೊಂದು ಗೂಡು ಕಟ್ಟಿಕೊಂಡಿತ್ತು. ಮರಿಗಳು ಸ್ವಲ್ಪ ದೊಡ್ಡವಾದಾಗ ಗುಬ್ಬಚ್ಚಿ ಆಹಾರ ತರಲು ಹೊರಗೆ ಹೋಯಿತು. ಹಾಗೆ ಹೋಗುವ ಮುಂಚೆ ಅದು ಮರಿಗಳಿಗೆ ಹೇಳಿತು "ಯಾರಾದರೂ ಏನಾದರೂ ಮಾತನಾಡಿಕೊಂಡರೆ ನನಗೆ ತಿಳಿಸಿ" ಮಕ್ಕಳು ಆಗಲಿ ಎಂದು ಒಪ್ಪಿದವು.

ತಾಯಿ ಗುಬ್ಬಚ್ಚಿ ಹಾರಿಹೋದಾಗ ರೈತ ಹೊಲದ ಬಳಿ ಬಂದ. ಬಲಿತಿದ್ದ ಜೋಳವನ್ನು ನೋಡುತ್ತಾ ಅವನು ತನ್ನ ಮಗನಿಗೆ "ನಾಳೆ ನಮ್ಮ ನೆರೆಹೊರೆಯವರನ್ನೆಲ್ಲಾ ಕರಕೊಂಡು ಬಾ. ಬೆಳಗ್ಗೆಯೇ ಜೋಳವನ್ನೆಲ್ಲಾ ಕುಯ್ದು ಹಾಕೋಣ !" ಎಂದ.

ಅದನ್ನು ಕೇಳಿ ಮರಿಗಳು ನಡುಗಿದವು. ತಾಯಿ ಹಿಂತಿರುಗುತ್ತಲೇ ಅವು ನಡೆದುದನ್ನೆಲ್ಲಾ ತಿಳಿಸಿ "ಅಮ್ಮಾ, ನಮ್ಮನ್ನು ಬೇರೆ ಕಡೆಗೆ ಕರಕೊಂಡು ಹೋಗು" ಎಂದು ಗೋಗರೆದವು.

ಆದರೆ ತಾಯಿ ಹೇಳಿತು : "ಹೆದರಬೇಡಿ ಮಕ್ಕಳೇ, ರೈತ ತನ್ನ ನೆರೆಹೊರೆಯವರಿಗೆ ಕಾದರೆ, ನಾಳೆ ಜೋಳ ಕುಯ್ಯೋದು ಸಾಧ್ಯವಾಗೋದಿಲ್ಲ."

ಅದರಂತೆಯೇ ರೈತ ಬೆಳಗ್ಗೆಯೇ ಹೊಲದ ಬಳಿ ಬಂದು ನಿಂತ. ಮಧ್ಯಾಹ್ನವಾದರೂ ಅವನಿಗೆ ಸಹಾಯ ಮಾಡುವ ನೆರೆಹೊರೆಯವರು ಬರಲಿಲ್ಲ. ಇದರಿಂದ ಸಿಟ್ಟುಗೊಂಡು ಅವನು "ಮಗನೇ, ಈ ನೆರೆಹೊರೆಯವರನ್ನು ನಂಬಿ ಪ್ರಯೋಜನವಿಲ್ಲ. ನಾಳೆ ನಮ್ಮ ಬಂಧುಗಳನ್ನೆಲ್ಲಾ ಕರೆದು ಬಾ. ಜೋಳ ಕುಯ್ದು ಬಿಡೋಣ" ಎಂದ.

ಮರಿಗಳಿಂದ ವಿಷಯ ತಿಳಿದ ತಾಯಿ ಗುಬ್ಬಚ್ಚಿ "ಹೆದರಬೇಡಿ ಮಕ್ಕಳೇ, ರೈತ ತನ್ನ ಬಂಧುಗಳಿಗಾಗಿ ಕಾದರೆ, ನಾಳೇನೂ ಜೋಳ ಕುಯ್ಯೋಕಾಗೊಲ್ಲ" ಎಂದಿತು.

ಮರುದಿನ ರೈತ ಕಾದದ್ದೇ ಬಂತು. ಬಂಧುಗಳು ಒಬ್ಬರೂ ಅತ್ತ ಸುಳಿಯಲಿಲ್ಲ. ರೈತನ ಕೋಪ ಇಮ್ಮಡಿಸಿತು. ಅವನು ಮಗನಿಗೆ "ನಾವು ಯಾರಿಗೂ ಕಾಯೋದು ಬೇಡ. ನಾಳೆ ಬೆಳಗ್ಗೆ ನಾವಿಬ್ಬರೇ ಬಂದು ಜೋಳ ಕುಯ್ದು ಬಿಡೋಣ" ಎಂದ.

ಮರಿಗಳು ತಾಯಿಗೆ ಈ ಸುದ್ದಿ ಮುಟ್ಟಿಸಿದುವು. "ಹಾಗಾದರೆ ರೈತ ನಾಳೆ ಜೋಳ ಕುಯ್ತಾನೆ. ನಾವು ಬೇರೆ ಕಡೆ ಹೋಗೋಣ" ಎನ್ನುತ್ತಾ ತಾಯಿ ತನ್ನ ಮರಿಗಳನ್ನು ಬೇರೆಡೆಗೆ ಸಾಗಿಸಿತು.

© KTBS Not to be republished

# ಸುಗ್ಗಿ

(ಈ ಪದ್ಯವನ್ನು ರಾಗವಾಗಿ ಹಾಡಿ ಮಕ್ಕಳಿಂದ ಹಾಡಿಸಿ)


ಸುಗ್ಗಿಯು ಬಂದಿತು ಹಿಗ್ಗನು ತಂದಿತು
ನಮ್ಮಯ ನಾಡಿನ ಜನಕೆಲ್ಲ ।

ಸಗ್ಗದ ಸುಖವನು ನೀಡುತ ರೈತಗೆ
ದುಡಿಯಲು ಹಚ್ಚಿತು ದಿನವೆಲ್ಲ ।



ಬೆಳೆಸಿಯೆ ತಿನ್ನುತ ಮಜ್ಜಿಗೆ ಕುಡಿಯುತ
ಇರುವವರು ರೈತರು ಸುಖದಲ್ಲಿ ।

ಜೋಳವ ಕೊಯ್ಯುತ ಗೂಡನು ಹಾಕುತ
ಕುಣಿವರು ರೈತರು ಹೊಲದಲ್ಲಿ ।



ಕಣವನು ಕಡಿಯುತ ನೀರನು ಹೊಡೆಯುತ
ಮೇಟಿಯ ಕುಣಿಯನು ಅಗೆಯುವರು ।

ತೆನೆಯನು ಮುರಿಯುತ ಹೆಸರನು ಹೇಳುತ
ಗುಂಪಿಯ ನೆಳೆಯುತ ಒಗೆಯುವರು ।

ಹಂತಿಯ ಹೊಡೆಯುತ ಕಂತಿಯ ತೆಗೆಯುತ
ಬೆಳಗಿನ ವರೆಗೂ ಹಾಡುವರು ।

ಕಾಳನು ತೂರುತ ಗಾಡಿಲಿ ಹೇರುತ
ಊರಿನ ಕಡೆಗೆ ಓಡುವರು ।

–ದಾ. ರಾ. ಬಳೂರಗಿ

©KTBS Not to be republished

## ಪದ್ಯಪಾಠ – ೬

# ಕಾಮನಬಿಲ್ಲು ಕಮಾನು ಕಟ್ಟಿದೆ

(ಈ ಪದ್ಯವನ್ನು ರಾಗವಾಗಿ ಹಾಡಿ ಮಕ್ಕಳಿಂದ ಹಾಡಿಸಿ)

ಕಾಮನಬಿಲ್ಲು ಕಮಾನು ಕಟ್ಟಿದೆ
ಮೋಡದ ನಾಡಿನ ಬಾಗಿಲಿಗೆ !

ಬಣ್ಣಗಳೇಳನು ತೋರಣ ಮಾಡಿದೆ
ಕಂದನ ಕಣ್ಣಿಗೆ ಚೆಂದವನೂಡಿದೆ !

ಹಣ್ಣಿನ ಹೂವಿನ ಹೊನ್ನನು ಕೂಡಿದೆ
ಮಕ್ಕಳಿಗೋಕುಳಿಯಾಟವನೂಡಿದೆ !

ತೆಂಗಿನ ತೋಟದ ಬುಡದಲಿ ಮೂಡಿದೆ
ಭೂಮಿಗೆ ಬಾನಿಗೆ ಸೇತುವೆ ಹೂಡಿದೆ !

ಕಾಮನಬಿಲ್ಲು ಕಮಾನು ಕಟ್ಟಿದೆ
ಮೋಡದ ನಾಡಿನ ಬಾಗಿಲಿಗೆ !


– ಕುವೆಂಪು

©KTBS
Not to be republished

## ಪದ್ಯಪಾಠ - ೭

# ಇಳೆಗೆ ಬಂತು ಮಳೆ

(ಈ ಪದ್ಯವನ್ನು ರಾಗವಾಗಿ ಹಾಡಿ, ಮಕ್ಕಳಿಂದ ಹಾಡಿಸಿ)



ಗುಡು ಗುಡು ಗುಡು ಗುಡು
ಗುಡುಗಲು ಮುಗಿಲು ।
ತಕ ತಕ ತಕ ತಕ
ಕುಣಿವುದು ನವಿಲು ॥

ಜುಳು ಜುಳು ಜುಳು ಜುಳು
ಹರಿವುದು ಹೊಳೆಯು ।
ಫಳ ಫಳ ಫಳ ಫಳ
ಹೊಳೆವುದು ಫಸಲು ॥



ಸುಳು ಸುಳು ಸುಳು ಸುಳು
ಸೂಸಲು ಗಾಳಿ ।
ಬಿರಿದಾ ಕುಸುಮಕೆ
ದುಂಬಿಯ ದಾಳಿ ॥

ಬಾನಲಿ ಮೂಡಲು
ಕಾಮನಬಿಲ್ಲು ।
ಚೆಣ್ಣರ ಲೋಕದಿ
ಹರಡಿತು ಗುಲ್ಲು ॥



ಹೆಚ್ಚಿತು ಆಗಲೆ
ಭೂಮಿಯ ಕಳೆಯು ।
ತೊಳೆಯಿತು ಒಡನೆ
ಊರಿನ ಕೊಳೆಯು ॥

– ಪ.ಗು. ಸಿದ್ಧಾಪುರ

©KTBS Not to be republished

# ಮಂತ್ರಿಯ ಜಾಣ್ಮೆ

[ಕಥೆಯನ್ನು ಓದಿ ಹೇಳಿ]

ವಿಜಯನಗರದ ಸಾಮ್ರಾಟ ಶ್ರೀ ಕೃಷ್ಣದೇವರಾಯ. ಅವನ ರಾಜಧಾನಿ ಹಂಪೆ. ಆ ರಾಜ್ಯದಲ್ಲಿ ತಿಮ್ಮರಸು ಎಂಬ ಮಂತ್ರಿ ಇದ್ದ. ಅವನು ಬುದ್ಧಿವಂತಿಕೆಗೂ, ಮುಂದಾಲೋಚನೆಗೂ ಹೆಸರಾಗಿದ್ದ.

ಶ್ರೀ ಕೃಷ್ಣದೇವರಾಯ ಆತನನ್ನು ಅಪ್ಪಾಜಿ ಎಂದು ಪ್ರೀತಿಯಿಂದ ಕರೆದು ಗೌರವಿಸುತ್ತಿದ್ದ. ಅಪ್ಪಾಜಿ ಕೀರ್ತಿ ಎಲ್ಲ ಕಡೆಗೂ ಹಬ್ಬಿತ್ತು. ಅದು ಕಳಿಂಗ ರಾಜನ ಕಿವಿಗೂ ಬಿತ್ತು. ಆ ರಾಜನಿಗೆ ಅಪ್ಪಾಜಿಯ ಚತುರತೆಯನ್ನು ಪರೀಕ್ಷಿಸುವ ಬಯಕೆ ಉಂಟಾಯಿತು.

ವಿಜಯನಗರದ ಅರಸನಿಗೆ ಕಳಿಂಗರಾಜ ಒಂದು ಮನವಿ ಕಳುಹಿಸಿದ. “ನಿಮ್ಮ ರಾಜ್ಯದಲ್ಲಿ ಸುಂದರವಾದ ಗುಲಾಬಿ ಹೂಗಳು ಬೆಳೆಯುವವು. ಅವು ನಮ್ಮ ರಾಣಿಯ ಮನಸ್ಸಿಗೆ ತುಂಬ ಹಿಡಿಸಿವೆ. ಒಂದಿಷ್ಟು ತಾಜಾ ಗುಲಾಬಿ ಹೂಗಳನ್ನು ಕಳುಹಿಸಿ ಕೊಡಿ” ಎಂದು ವಿನಂತಿಸಿದ. ಅದನ್ನು ಓದಿ ಕೃಷ್ಣದೇವರಾಯನಿಗೆ ಅಚ್ಚರಿಯೂ ಚಿಂತೆಯೂ ಆಯಿತು. ಅಲ್ಲಿಗೆ ನಡೆದುಕೊಂಡು ಹೋದರೆ ಸುಮಾರು ಮೂರು ತಿಂಗಳ ಪ್ರಯಾಣ. ಹೂಗಳನ್ನು ಕಿತ್ತು ಕಳುಹಿಸಿದರೆ ಬಾಡಿ ಹೋಗುವುವು. ‘ತಾಜಾ ಹೂಗಳನ್ನು ಕಳುಹಿಸುವುದೆಂತು?’ ಎಂದು ಯೋಚಿಸತೊಡಗಿದ. ಈ ಸಮಸ್ಯೆಯನ್ನು ರಾಜ ಎಲ್ಲರಿಗೂ ವಿವರಿಸಿದ.

ಯಾರಿಗೂ ಉಪಾಯ ಹೊಳೆಯಲಿಲ್ಲ. ದಿಕ್ಕು ತೋರದಾಗಿ ಕಳವಳಗೊಂಡರು.

ಆಗ ಅಪ್ಪಾಜಿ ಸಮಸ್ಯೆಗೆ ಪರಿಹಾರ ಹುಡುಕಿದ. ಒಂದು ಗಾಡಿಯನ್ನು ತರಿಸಿ ಫಲವತ್ತಾದ ಮಣ್ಣು ಮತ್ತು ಗೊಬ್ಬರ ತುಂಬಿಸಿದ. ಗುಲಾಬಿಯ ಸಸಿಗಳನ್ನು ನೆಡಿಸಿ ನೀರು ಹನಿಸಿದ. ಗಾಡಿಯೊಂದಿಗೆ ರಾಜಭಟರು ಹಾಗೂ ಅಪ್ಪಾಜಿ ಕಳಿಂಗಕ್ಕೆ ಹೊರಟರು.

ದಾರಿಯಲ್ಲಿ ನೀರನ್ನು ಹಾಕುತ್ತಾ ಸಸಿಗಳನ್ನು ಪೋಷಿಸಿದರು. ಮೂರು ತಿಂಗಳ ನಂತರ ಗಾಡಿ ಕಳಿಂಗ ರಾಜ್ಯವನ್ನು ತಲುಪಿತು. ಗಾಡಿಯ ತುಂಬಾ ಗುಲಾಬಿ ಹೂಗಳು ಅರಳಿ ನಿಂತಿದ್ದವು. ಸೌಂದರ್ಯ ರಾಶಿಯೇ ಮೈದುಂಬಿತ್ತು. ಅದನ್ನು ಕಂಡ ಕಳಿಂಗರಾಜನಿಗೆ ತುಂಬಾ ಸಂತೋಷವಾಯಿತು. ಅಪ್ಪಾಜಿಯ ಚತುರತೆಯನ್ನು ಮೆಚ್ಚಿ ಮನಸಾರೆ ಹೊಗಳಿದ. ಅವನನ್ನು ತುಂಬು ಹೃದಯದಿಂದ ಸನ್ಮಾನಿಸಿದ.

**“ಬುದ್ಧಿವಂತಿಕೆಗೆ ಮಿಗಿಲಾದುದು ಯಾವುದೂ ಇಲ್ಲ”.**

©KTBS Not to be republished

ಗದ್ಯಪಾಠ – ೯

# ರಾಮಕೃಷ್ಣನ ಬೆಕ್ಕು

[ಕಥೆಯನ್ನು ಓದಿ ಹೇಳಿ]

ಒಮ್ಮೆ ಕೃಷ್ಣದೇವರಾಯ ಹತ್ತಾರು ಜನರಿಗೆ ಸಣ್ಣ ಬೆಕ್ಕಿನ ಮರಿಗಳನ್ನು ಕೊಟ್ಟು, ಅವನ್ನು ಸಾಕಲು ಅನುಕೂಲವಾಗುವಂತೆ ಒಂದೊಂದು ಹಸುವನ್ನೂ ಕೊಟ್ಟ.

"ಮಹಾಪ್ರಭೂ ನನಗೂ ಒಂದು ಬೆಕ್ಕಿನಮರಿ ಕೊಡಿ" ಎಂದ ತೆನಾಲಿ ರಾಮಕೃಷ್ಣ. ಅರಸ ಅವನಿಗೂ ಒಂದು ಮರಿ ಮತ್ತು ಹಸುವನ್ನು ಕೊಟ್ಟು "ನಿಮ್ಮಲ್ಲಿ ಬೆಕ್ಕನ್ನು ಯಾರು ಚೆನ್ನಾಗಿ ಬೆಳೆಸುತ್ತೀರೋ ಅವರಿಗೆ ಬಹುಮಾನ ಕೊಡ್ತೇನೆ" ಎಂದ.

ಮೂರು ತಿಂಗಳ ಬಳಿಕ ರಾಜನ ಆಜ್ಞೆಯಂತೆ ಎಲ್ಲರೂ ಬೆಕ್ಕುಗಳನ್ನು ಕರೆತಂದರು. ಬೆಕ್ಕುಗಳಿಗೆಂದು ರಾಣಿವಾಸದವರು ಒಂದೊಂದು ಬಟ್ಟಲು ಹಾಲನ್ನಿಟ್ಟರು. ಬೇರೆಲ್ಲ ಬೆಕ್ಕುಗಳೂ ಹಾಲನ್ನು ಕುಡಿಯಲಾರಂಭಿಸಿದಾಗ ರಾಮಕೃಷ್ಣನ ಬೆಕ್ಕು ಮಾತ್ರ ಸಿರ್ ಎಂದು ಮುಖ ತಿರುಗಿಸಿತು. ಅದನ್ನು ಕಂಡ ಅರಸ ಕೇಳಿದ "ರಾಮಕೃಷ್ಣ, ನಿನ್ನ ಬೆಕ್ಕೇಕೆ ಹಾಲು ಕುಡಿಯುತ್ತಿಲ್ಲ ?"

"ಮಹಾಪ್ರಭೂ, ಬೆಕ್ಕುಗಳಿಗೆ ಕಣ್ಣು ಮುಚ್ಚಿ ಹಾಲು ಕುಡಿಯೋದೊಂದು ದುರಭ್ಯಾಸ. ನನ್ನ ಬೆಕ್ಕು ಹಾಗೆ ಮಾಡಬಾರದೂಂತ ಮೊದಲ ದಿನ ಬಿಸಿ ಹಾಲನ್ನು ಕೊಟ್ಟೆ. ಕುಡಿದಾಗ ಅದರ ಮೀಸೆ ಸುಟ್ಟಿತು. ಮತ್ತೆ ಪ್ರತಿದಿನವೂ ಹಾಗೆ ಮಾಡಿದೆ. ಈಗ ಬೆಕ್ಕು ಹಾಲನ್ನೇ ಕುಡಿಯೋದಿಲ್ಲ" ಎಂದ ರಾಮಕೃಷ್ಣ.

"ಆದರೆ ನಿನ್ನ ಬೆಕ್ಕು ಬೇರೆಲ್ಲ ಬೆಕ್ಕುಗಳಿಗಿಂತ ದಪ್ಪವಾಗಿದೆಯಲ್ಲಾ. ಅದು ಹೇಗೆ?" ಎಂದು ಪ್ರಶ್ನಿಸಿದ ಅರಸ.

"ಮಹಾಸ್ವಾಮೀ, ಪ್ರಾಣಿಗಳು ತಮ್ಮ ಆಹಾರಕ್ಕೆ ಇನ್ನೊಬ್ಬರನ್ನು ಅವಲಂಬಿಸೊಲ್ಲ. ಹಾಲಿಲ್ಲದಿದ್ದರೇನಂತೆ? ನನ್ನ ಬೆಕ್ಕು ಪ್ರತಿದಿನವೂ ಬೇಕಾದಷ್ಟು ಇಲಿ ಮತ್ತು ಪಾರಿವಾಳಗಳನ್ನು ತಿನ್ನುತ್ತಿತ್ತು. ಅದಕ್ಕೇ ಅದು ದಪ್ಪವಾಗಿದೆ" ಎಂದ ರಾಮಕೃಷ್ಣ.

ರಾಜ ಸುಪ್ರೀತನಾಗಿ "ಈ ಬೆಕ್ಕು ನಮ್ಮಲ್ಲೇ ಇರಲಿ" ಎಂದ.

"ಬೆಕ್ಕಿನ ಹಿಂದೆ ಬಂದ ಹಸು ?" ಎಂದು ಕೇಳಿದ ರಾಮಕೃಷ್ಣ.

"ಅದು ಗೋದಾನ. ಹಸು ನಿನಗೇ ಇರಲಿ" ಎಂದು ನಕ್ಕು ನುಡಿದ ಅರಸ.

©KTBS Not to be republished

ಗದ್ಯಪಾಠ – ೧೦

# ದುರಾಸೆಯ ಫಲ

[ಕಥೆಯನ್ನು ಓದಿ ಹೇಳಿ]

ಒಂದು ಊರಿನಲ್ಲಿ ಈರಣ್ಣನೆಂಬ ವ್ಯಕ್ತಿ ಇದ್ದ. ಅವನು ಮಹಾ ಜಿಪುಣನೆಂದು ಹೆಸರುವಾಸಿಯಾಗಿದ್ದ. ಯಾವುದೇ ಸಾಮಾನು ತರಲಿಕ್ಕೆ ಪೇಟೆಗೆ ಹೋದರೆ ಚೌಕಾಸಿ ಮಾಡದೇ ಕೊಳ್ಳುತ್ತಿರಲಿಲ್ಲ. ಒಮ್ಮೆ ಅವನ ತಾಯಿ ಎರಡು ರೂಪಾಯಿ ಕೊಟ್ಟು ತೆಂಗಿನಕಾಯಿ ತೆಗೆದುಕೊಂಡು ಬಾರೆಂದು ಹೇಳಿದಳು. ಈರಣ್ಣ ಸಮೀಪದ ಅಂಗಡಿಗೆ ಹೋಗಿ,

"ತೆಂಗಿನಕಾಯಿ ಹೇಗಪ್ಪಾ ?" ಎಂದು ಕೇಳಿದ.

"ಎರಡು ರೂಪಾಯಿಗೊಂದು ಸ್ವಾಮಿ" ಎಂದ ಅಂಗಡಿಯಾತ.

"ಎರಡು ರೂಪಾಯಿ ತುಂಬಾ ಹೆಚ್ಚಾಯಿತು. ಒಂದು ರೂಪಾಯಿ ಮಾಡಿಕೊಡು" ಎಂದ ಈರಣ್ಣ.

"ಆಗಲ್ಲರಿ, ನಾವು ಪೇಟೆಯಿಂದ ತಂದು ಮಾರುತ್ತೇವೆ. ನಾವು ಕೊಳ್ಳುವ ಬೆಲೆಯೇ ಒಂದು ಕಾಲು ರೂಪಾಯಿ" ಎಂದ ಅಂಗಡಿಯವ.

"ಅಂದರೆ ಪೇಟೆಯಲ್ಲಿ ಒಂದೂ ಕಾಲು ರೂಪಾಯಿಗೆ ಒಂದು ತೆಂಗಿನಕಾಯಿ ಸಿಕ್ಕುತ್ತದೆಯೇ?" ಎಂದು ಕೇಳಿದ ಈರಣ್ಣ.

"ಇನ್ನು ಕಡಿಮೆ ಬೆಲೆಗೆ ಸಿಕ್ಕರೂ ಸಿಗಬಹುದು" ಎಂದ ಅಂಗಡಿಯವ. "ಪೇಟೆಗೆ ಹೋಗಿ ಏಕೆ ತರಬಾರದು?" ಎಂದುಕೊಂಡ ಈರಣ್ಣ ಪೇಟೆಯ ದಾರಿ ಹಿಡಿದೇ ಬಿಟ್ಟ.

ಪೇಟೆಯಲ್ಲಿಯ ಒಂದು ದೊಡ್ಡ ಅಂಗಡಿಯ ಮುಂದೆ ನಿಂತು "ತೆಂಗಿನ ಕಾಯಿ ಹೇಗೆ?" ಎಂದಾಗ "ಒಂದು ರೂಪಾಯಿಗೆ ಒಂದು" ಎಂದ ಅಂಗಡಿಯಾತ.

"ಒಂದು ರೂಪಾಯಿ ತುಂಬಾ ಹೆಚ್ಚಾಯಿತು. ಎಂಟಾಣೆಗೊಂದು ಕೊಡೋದಿಲ್ಲವೇ?" ಎಂದ ಈರಣ್ಣ.

"ಇಲ್ಲಾರಿ, ತೆಂಗಿನ ತೋಟದ ಮಾಲೀಕರಿಂದಲೇ ನಾವು ಎಂಟಾಣೆಗೆ ಕೊಳ್ಳುತ್ತೇವೆ. ನೀವು ತೋಟಕ್ಕೆ ಹೋದರೆ ಎಂಟಾಣೆಗೊಂದು ಕಾಯಿ ಸಿಕ್ಕೀತು" ಎಂದ.

©KTBS Not to be republished

ಈರಣ್ಣ ತೆಂಗಿನ ತೋಟದತ್ತ ನಡೆದೇ ಬಿಟ್ಟ.

ತೆಂಗಿನಕಾಯಿಯ ರಾಶಿಯ ಮುಂದೆ ನಿಂತಿದ್ದ ತೋಟದ ಮಾಲೀಕ ಈರಣ್ಣನನ್ನು ತೋಟಕ್ಕೆ ಸ್ವಾಗತಿಸಿದ.

“ತೆಂಗಿನಕಾಯಿ ಹೇಗೆ ಕೊಡುತ್ತೀರಿ?” ಎಂದ ಈರಣ್ಣ.

“ಎಂಟಾಣೆಗೊಂದು” ಎಂದ ತೋಟದ ಯಜಮಾನ.

“ತುಂಬಾ ಹೆಚ್ಚಾಯಿತು. ನಾಲ್ಕಾಣೆಗೊಂದು ಕೊಡಿ” ಎಂದ

“ಮರದಿಂದ ಕಾಯಿ ಕೀಳುವ ಆಳಿಗೆ ನಾವು ಪ್ರತಿ ಕಾಯಿಗೆ ನಾಲ್ಕಾಣೆ ಕೊಡುತ್ತೇವೆ. ಬೇಕಾದರೆ ನೀವೇ ಮರಹತ್ತಿ ಕಾಯಿ ಕಿತ್ತುಕೊಳ್ಳಿ. ಆಗ ನಾಲ್ಕಾಣೆಯನ್ನೇ ಕೊಡಿ” ಎಂದ ಯಜಮಾನ.

ಮರಹತ್ತಿದರೆ ನಾಲ್ಕಾಣೆ ಉಳಿಯುತ್ತದೆಯೆಂದು ಯೋಚಿಸಿದ ಈರಣ್ಣ ಬಾವಿಯ ಕಡೆ ವಾಲಿ ನಿಂತಿದ್ದ ದೊಡ್ಡ ಮರವನ್ನು ಸರಸರ ಏರಿ ಒಂದು ಕಾಯಿ ಹರಿದು ಕೆಳಗೆ ಹಾಕಿದ. ಇನ್ನೇನು ಇಳಿಯಬೇಕೆನ್ನುವಷ್ಟರಲ್ಲಿ ಕಾಲು ಜಾರಿತು. ಆದರೆ ಕೈಯಿಂದ ತೆಂಗಿನ ಗರಿಯನ್ನು ಹಿಡಿದಿದ್ದುದರಿಂದ ಅದನ್ನು ಹಿಡಿದು ಜೋತು ಬಿದ್ದ.

ಅಷ್ಟರಲ್ಲಿ ಇಬ್ಬರು ಒಂಟೆ ಸವಾರರು ನೀರಿಗಾಗಿ ತೋಟಕ್ಕೆ ಬಂದರು. ತನ್ನ ಪ್ರಾಣ ಉಳಿಸಬೇಕೆಂದು ಈರಣ್ಣ ಅವರಲ್ಲಿ ವಿನಂತಿಸಿಕೊಂಡ.

“ನನ್ನನ್ನು ಕೆಳಗೆ ಇಳಿಸಿದರೆ ನಿಮಗೆ ಎರಡು ರೂಪಾಯಿ ಕೊಡುತ್ತೇನೆ”

ಎಂದು ಹೇಳಿದ.

ಅದನ್ನು ಕೇಳಿದ ಮೊದಲನೆಯವ ಒಂಟೆ ಸವಾರ. ತನ್ನ ಒಂಟೆಯನ್ನು ತಂದು ಕೆಳಗೇ ನಿಲ್ಲಿಸಿ, ಅದರ ಮೇಲೆ ನಿಂತು ಈರಣ್ಣನ ಕಾಲು ಹಿಡಿದು ಇಳಿಸಿಕೊಳ್ಳಬೇಕೆನ್ನುವಷ್ಟರಲ್ಲಿ ಒಂಟೆ ಮುಂದೆ ಹೋಗಿಬಿಟ್ಟಿತು. ಆಗ ಒಂಟೇ ಸವಾರನೂ ಈರಣ್ಣನ ಕಾಲು ಹಿಡಿದು ಜೋತು ಬಿದ್ದು ಹೇಳಿದ. “ಮಹಾಶಯ ನೀನು ಕೈ ಬಿಟ್ಟರೆ ನಾವಿಬ್ಬರೂ ಸಾಯುತ್ತೇವೆ. ನಿನಗೆ ನಾನು ನಾಲ್ಕು ರೂಪಾಯಿ ಕೊಡುತ್ತೇನೆ. ಕೈಬಿಡಬೇಡ” ಎಂದು ಈರಣ್ಣನನ್ನು ವಿನಂತಿಸಿಕೊಂಡ.

ಎರಡನೆಯ ಒಂಟೆಯ ಮೇಲಿದ್ದವ ಅವರನ್ನು ಇಳಿಸಬೇಕೆಂದು ಒಂಟೆಯನ್ನು ತಂದು ನಿಲ್ಲಿಸಿ, ಅದರ ಮೇಲೆ ನಿಂತು ತನ್ನ ಸಂಗಡಿಗನ ಕಾಲು ಹಿಡಿದು ಇಳಿಸಿಕೊಳ್ಳಬೇಕೆನ್ನುವಷ್ಟರಲ್ಲಿ ಒಂಟೆ ಮುಂದೆ ಹೋಗಿ, ಅವನೂ ಮೊದಲನೆಯವನಂತೆಯೇ ಜೋತು ಬಿದ್ದ. ಅವನು

©KTBS Not to be republished

"ಗೆಳೆಯ ನೀನು ಕೈಬಿಟ್ಟರೆ ನಾವಿಬ್ಬರೂ ಸಾಯುತ್ತೇವೆ. ನಿನಗೆ ಎಂಟು ರೂಪಾಯಿ ಕೊಡುತ್ತೇನೆ ಕೈಬಿಡಬೇಡ" ಎಂದು ತನ್ನ ಸಂಗಡಿಗನನ್ನು ವಿನಂತಿಸಿದ.

ಈ ಮಾತು ಕೇಳಿ ಈರಣ್ಣನಿಗೆ ಸಿಟ್ಟು ಬಂತು. ತನ್ನ ದುರಾಸೆಯ ಬುದ್ಧಿಯನ್ನು ಪ್ರದರ್ಶಿಸುತ್ತಾ ಹೀಗೆ ಹೇಳಿದ.

"ಅವನಿಗೆ ಎಂಟು ರೂಪಾಯಿ ಏಕೆ ಕೊಡುತ್ತಿ ? ನಿಮ್ಮಿಬ್ಬರ ಭಾರ ನನ್ನ ಕೈಯಲ್ಲಿದೆ. ನಾನು ಕೈಬಿಟ್ಟರೆ ನೀವಿಬ್ಬರೂ ಸಾಯುತ್ತೀರಿ" ಎಂದು ಜೋರು ಮಾಡಿದ.

ಅದಕ್ಕೆ ಮಧ್ಯದಲ್ಲಿ ಜೋತು ಬಿದ್ದವ.

"ಆಗಲಪ್ಪಾ ನನ್ನ ನಾಲ್ಕು ರೂಪಾಯಿ ಮತ್ತು ಅವನ ಎಂಟು ರೂಪಾಯಿ ನಿನಗೇ ಕೊಡುತ್ತೇನೆ. ದಯಮಾಡಿ ನಮ್ಮ ಜೀವ ಉಳಿಸು" ಎಂದು ಅಂಗಲಾಚಿದ.

ನಾಲ್ಕಾಣೆ ಉಳಿಸಲಿಕ್ಕೆ ಮರವೇರಿದ ತನಗೆ ಹನ್ನೆರಡು ರೂಪಾಯಿ ಲಾಭವಾದದ್ದಕ್ಕೆ ಈರಣ್ಣ ಖುಷಿಯಿಂದ ಉಬ್ಬಿಹೋದ.

"ಹಾಗೆ ಬಾ ದಾರಿಗೆ" ಎಂದು ಖುಷಿಯಲ್ಲಿ ಎರಡೂ ಕೈಯಿಂದ ಚಪ್ಪಾಳೆ ತಟ್ಟಿದ. ಚಪ್ಪಾಳೆ ತಟ್ಟುತ್ತಿದ್ದಂತೆಯೇ ಮೂವರೂ ಹಾಳು ಬಾವಿಯಲ್ಲಿ ಬಿದ್ದರು.

✤ ✤ ✤

©KTBS Not to be republished

## ಭಾಗ–೨

## ಅಕ್ಷರ ಕಲಿಕಾ ಪಾಠಗಳು

## (ಬೋಧನಾ ಕಲಿಕಾ ಪಾಠ ಪರಿಕರಗಳು)

• ಮೂಲ ಅಕ್ಷರ ಕಲಿಕಾ ಪಾಠಗಳು

### ಪಾಠ – ೧

# ರ ಗ ಸ ದ ಅ


• ಚಿತ್ರ ತೋರಿಸಿ – ಪದ ಹೇಳಿಸಿ

ರ



ರಸ

ಗ




ಗರಗಸ

ಸ



ಸರ

ದ



ದಸರ

ಅ



ಅರಸ

©KTBS Not to be republished

- ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ಹೇಳಿ

ರ ಗ ಸ ದ ಅ

- ಅಕ್ಷರಗಳನ್ನು ತೋರಿಸಿ ಬರೆಯಿಸಿ

ರ ಗ ಸ ದ ಅ

ರ ಗ ಸ ದ ಅ

©KTBS Not to be republished


- ಪದಗಳನ್ನು ಓದಿಸಿ ಬರೆಯಿಸಿ

| | | | | |
|---|---|---|---|---|
| ಅರ | ದರ | ಸರ | ಗರ | ರಸ |
| ಸದರ | ಅದರ | ದರಗ | ಸರಸ | ಅರಸ |
| ದಸರ | ಗರಗಸ | ಸರಸರ | ಗರಗರ | ಅರಸರ |

- **ಚುಕ್ಕಿ ಸೇರಿಸಿ ಪದ ರಚಿಸಲು ತಿಳಿಸಿ**

ಅರಸ ಗರಗಸ ದಸರ

- **ಚಿತ್ರ ತೋರಿಸಿ ಪದ ಬರೆಯಿಸಿ**






- **ಅಕ್ಷರ ಆರಿಸಿ ಪದ ಪೂರ್ಣಗೊಳಿಸಲು ತಿಳಿಸಿ**

೧. ಗರ _____ ಸ (ದ ಗ ಅ)


೨. ಸ _____ (ಗ ರ ಸ)

೩. ದ _____ ರ (ಗ ಸ ರ)

೪. _____ ರಸ (ರ ಗ ಅ)

©KTBS Not to be republished

## • ಚಿತ್ರ – ಪದ ಹೊಂದಿಸಲು ತಿಳಿಸಿ

| | | |
|---|---|---|
| ಅ |  | ದಸರ |
| ಆ |  | ಅರಸ |
| ಇ |  | ಸರ |
| ಈ |  | ಗರಗಸ |

©KTBS Not to be republished

## • ಕಲಿತ ಅಕ್ಷರ/ಪದ – ಓದಿಸಿ

| | | | | |
|---|---|---|---|---|
| ರ | ಗ | ಸ | ದ | ಅ |
| ಅರ | ಸರ | ದರ | ಸದರ | ದರಗ |
| ಅರಸ | ಗರಗಸ | ಸರಸರ | ದಸರ | ಗರಗರ |

ಪಾಠ – ೨

# ಜ ಉ ಮ ಬ ನ

• ಚಿತ್ರ ತೋರಿಸಿ – ಪದ ಹೇಳಿಸಿ

ಜ



ಜನ

ಉ




ಉರಗ

ಮ



ಮರ

ಬ



ಬನ

ನ



ನಗರ

©KTBS Not to be republished

• ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ತಿಳಿಸಿ

ಜ ಉ ಮ ಬ ನ

• ಅಕ್ಷರಗಳನ್ನು ತೋರಿಸಿ ಬರೆಯಿಸಿ

ಜ ಉ ಮ ಬ ನ

• ಪದಗಳನ್ನು ಓದಿಸಿ

| | | | | |
|---|---|---|---|---|
| ಜನ | ಉಮ | ಬನ | ನಗ | ಮನ |
| ಜಮ | ಮಜ | ದನ | ಬರ | ನರ |
| ಜಗ | ಮಗ | ಸಮ | ಸಜ | ರಜ |
| ಉರಗ | ನಗರ | ಅಮರ | ಉದರ | ಸರಸ |

©KTBS
Not to be republished

ನಮನ ಮದಗಜ ಮದರಸ ನಗರದ ಜನ

ಮನ ಜನರ ಬನದ ಮರ

• **ಗೆರೆ ಎಳೆದಿರುವ ಅಕ್ಷರಗಳನ್ನು ಗುರುತಿಸಲು ತಿಳಿಸಿ**

ಮರ ಬನ ಜನ ಸಮ

ನಗರ ದಸರ ಗಗನ ನಮನ

• **ಕೊಟ್ಟಿರುವ ಅಕ್ಷರಗಳಲ್ಲಿ ಸರಿಯಾದ ಅಕ್ಷರ ಆರಿಸಿ ಬಿಟ್ಟಪದ ಪೂರ್ಣಗೊಳಿಸಲು ತಿಳಿಸಿ**

೧. ನ ____ ನ (ಮ ಸ ಅ) ________

೨. ಗ ____ (ಬ ಸ ಜ) ________

೩. ಉ ____ ಗ (ಗ ಸ ರ) ________

೪. ____ ರ (ಬ ನ ಜ) ________



೫. ____ ಗ (ಮ ಸ ಅ) ________

೬. ಗ ____ ನ (ಸ ಗ ನ) ________

೭. ____ ಮನ (ಸ ನ ಮ) ________

©KTBS Not to be republished

• ಚಿತ್ರ ನೋಡಿ – ಪದ ಹೊಂದಿಸಲು ತಿಳಿಸಿ

| | ಚಿತ್ರ | ಪದ |
| --- | --- | --- |
| ಅ. |  | ಮರ |
| ಆ. |  | ನಗರ |
| ಇ. |  | ಗರಗಸ |
| ಈ. |  | ಉರಗ |

• ಕೊಟ್ಟಿರುವ ಅಕ್ಷರಗಳ ಸಹಾಯದಿಂದ ಪದ ರಚಿಸಿ ಚೌಕದಲ್ಲಿ ಬರೆಯಲು ತಿಳಿಸಿ.

ರ ಅ ಮ ಸ ದ ಜ ಗ


©KTBS Not to be republished

• ಚುಕ್ಕಿ ಸೇರಿಸಿ – ಪದ ರಚಿಸಿ ಚೌಕದಲ್ಲಿ ಬರೆಯಲು ತಿಳಿಸಿ

ನಗರ ಉರಗ ಅಮರ ಮದಗಜ

• ಚಿತ್ರ ತೋರಿಸಿ – ಪದ ಬರೆಯಿಸಿ









• ಕಲಿತ ಅಕ್ಷರ/ಪದಗಳನ್ನು ಓದಿಸಿ – ಬರೆಯಿಸಿ.

ರ ಗ ಸ ದ ಅ – ಜ ಉ ಮ ಬ ನ

ಮಗ ರಜ ಬನ ಸಮ ಗಜ ನಗ

ಅರಸ ನಗರ ಉದರ ಉರಗ ದಸರ

© KTBS Not to be republished

## ಪಾಠ – ೩

# ಪ ಯ ವ ಟ ಚ

- ಚಿತ್ರ ತೋರಿಸಿ – ಪದ ಹೇಳಿಸಿ

ಪ




ಪಟ

ಯ



ನಯನ

ವ



ವನ

ಚ



ಚಮಚ

©KTBS Not to be republished

• ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ತಿಳಿಸಿ

ಪ ಯ ವ ಟ ಚ

• ಅಕ್ಷರಗಳನ್ನು ತೋರಿಸಿ – ಬರೆಯಿಸಿ

ಪ ಯ ವ ಟ ಚ

ಪ ಯ ವ ಟ ಚ

• ಪದಗಳನ್ನು ಓದಿಸಿ


| | | | | |
|---|---|---|---|---|
| ಜಯ | ಜಪ | ನಟ | ಉಮ | ಮಯ |
| ಪದ | ನಯ | ಗಯ | ಪಟ | ಪಚನ |
| ಉದಯ | ನಯನ | ವಚನ | ಚಮಚ | ಟಪಟಪ |
| ಚಟಚಟ | ವಟವಟ | ಗಟಗಟ | ಮಟಮಟ | ಪಟಪಟ |


©KTBS Not to be republished

- ಚುಕ್ಕಿ ಸೇರಿಸಿ – ಪದ ರಚಿಸಲು ತಿಳಿಸಿ

| ವಚನ | ಪವನ | ಜಪ | ನಯನ |
|---|---|---|---|
| | | | |
| | | | |
| | | | |

- ಚಿತ್ರ ತೋರಿಸಿ – ಪದ ಬರೆಯಿಸಿ



________ ________ ________ ________

- ಕೊಟ್ಟಿರುವ ಅಕ್ಷರಗಳಲ್ಲಿ ಸರಿಯಾದ ಅಕ್ಷರ ಆರಿಸಿ ಹೇಳಿಸಿ ಬರೆಯಿಸಿ

೧. ____ ಚನ (ಯ ವ ನ)

೨. ನ ____ ನ (ಯ ಮ ಜ)

೩. ____ ದಯ (ಯ ಸ ಉ)

೪. ಪ ____ (ಯ ಟ ಜ)

೫. ವ ____ ನ (ಚ ಯ ಉ)

© KTBS Not to be republished

- ಪದಗಳಲ್ಲಿ ಎರಡು ಬಾರಿ ಬಂದಿರುವ ಅಕ್ಷರಗಳನ್ನು ಗುರುತಿಸಿ ಬರೆಯಲು ತಿಳಿಸಿ

| | | | |
|---|---|---|---|
| ಮಾದರಿ : | ನಮನ | ನ | ನ |
| | ಗಗನ | ____ | ____ |
| | ನಯನ | ____ | ____ |
| | ಸರಸ | ____ | ____ |
| | ಸರಸರ | ____ | ____ |
| | ಚಮಚ | ____ | ____ |

- ಅಕ್ಷರಗಳನ್ನು ಬಳಸಿ ಪದ ರಚಿಸಲು ತಿಳಿ

ಸ ದ ಗ ಜ ಮ ನ ಪ ಚ ಉ ಯ ರ ಅ ವ ಟ

©KTBS Not to be republished

• ಕಲಿತ ಅಕ್ಷರ/ಪದಗಳನ್ನು ಓದಿಸಿ – ಬರೆಯಿಸಿ

ರ ಗ ಸ ದ ಅ – ಜ ಉ ಮ ಬ ನ

ಪ ಯ ವ ಟ ಚ

| | | | |
|---|---|---|---|
| ಜಯ | ಪಟ | ಪದ | ಮರ |
| ನಯ | ನಟ | ಜನ | ಅರ |
| ವಚನ | ಚಮಚ | ನಯನ | ಉದಯ |
| ಉರಗ | ಸಮಯ | ಚಟಪಟ | ಸರಸರ |
| ಗರಗಸ | ಮದಗಜ | ಜನಮನ | ಅರಸ |

______ ______ ______ ______

______ ______ ______ ______

______ ______ ______ ______

______ ______ ______ ______

______ ______ ______ ______

©KTBS Not to be republished

## ನನ್ನ ಸಾಧನೆ – ೧

• ಅಕ್ಷರಗಳನ್ನು ಓದಿಸಿ – ಬರೆಯಿಸಿ

ಜ ರ ಅ ಗ ನ ದ ಪ ಸ ಟ ಉ ಯ ಚ ಮ

• ಖಾಲಿ ಜಾಗ ತುಂಬಿ, ಪದ ಪೂರ್ಣಗೊಳಿಸಲು ತಿಳಿಸಿ

ಅ ___ ಸ    ದ ___ ರ    ಚ ___ ಚ    ಗ ___ ನ

ಉ ___ ಯ    ಅ ___    ___ ಟ    ಮ ___ ಗ ___

ಉ ___ ಗ    ನ ___ ರ    ನ ___ ನ    ಗ ___ ಗ ___


• ವಾಕ್ಯಗಳನ್ನು ಓದಿಸಿ – ಬರೆಯಿಸಿ

ಅರಸರ    ದಸರದ    ಮದಗಜ

ಉದಯದ    ಸಮಯ    ರಸಮಯ

©KTBS Not to be republished

• ರ ಅಕ್ಷರ ಬಳಸಿ ಪದ ಬರೆಯಲು ತಿಳಿಸಿ




©KTBS
Not to be republished

• ಅಕ್ಷರ ಬಳಸಿ ಪದ ಬರೆಯಲು ತಿಳಿಸಿ

| ರ ಗ ಸ ದ ಅ | ಜ ಉ ಮ ಬ ನ | ಪ ಯ ವ ಟ ಚ |
|---|---|---|
| ________ | ________ | ________ |
| ________ | ________ | ________ |
| ________ | ________ | ________ |
| ________ | ________ | ________ |
| ________ | ________ | ________ |
| ________ | ________ | ________ |
| ________ | ________ | ________ |

## ಪಾಠ – ೪

# ಲ ಡ ಇ ಊ ಕ

• ಚಿತ್ರ ತೋರಿಸಿ – ಪದ ಹೇಳಿಸಿ

ಲ



ಸಲಗ

ಡ



ಕಡಗ

ಇ



ಇನ

ಊ



ಊಟ

ಕ



ಕರಗ

©KTBS Not to be republished

• ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ತಿಳಿಸಿ

ಲ ಡ ಇ ಊ ಕ

• ಅಕ್ಷರಗಳನ್ನು ತೋರಿಸಿ ಬರೆಯಿಸಿ

ಲ ಡ ಇ ಊ ಕ

©KTBS Not to be republished

• ಪದ ಓದಿಸಿ – ಬರೆಯಿಸಿ





| | | | | |
|---|---|---|---|---|
| ಜಲ | ಇನ | ಊಟ | ಕದ | ಕಡ |
| ಲವ | ಕಚ | ಊನ | ಲಯ | ಕರ |
| ಬಲ | ಕದನ | ಉದಕ | ಕಡಜ | ಕಡಗ |

| | | | | |
|---|---|---|---|---|
| ಅಗಲ | ಕರಗ | ಲಕಲಕ | ಕಲಕಲ | ಕಟಕಟ |
| ______ | ______ | ______ | ______ | ______ |
| ______ | ______ | ______ | ______ | ______ |
| ______ | ______ | ______ | ______ | ______ |
| ______ | ______ | ______ | ______ | ______ |
| ______ | ______ | ______ | ______ | ______ |
| ______ | ______ | ______ | ______ | ______ |

- ಚುಕ್ಕಿ ಸೇರಿಸಿ – ಪದ ಬರೆಯಲು ತಿಳಿಸಿ

| | | | | |
|---|---|---|---|---|
| ಜಲ | ಕರಗ | ಕಲರವ | ಊನ | ಕಡ |
| | | | | |
| | | | | |
| | | | | |

- ಚಿತ್ರ ತೋರಿಸಿ ಪದ ಬರೆಯಿಸಿ

______ ______ ______ ______

©KTBS Not to be republished

• ಬಿಟ್ಟಿರುವ ಸ್ಥಳದಲ್ಲಿ ಸರಿಯಾದ ಅಕ್ಷರ ಆರಿಸಿ – ಬರೆಯಿಸಿ

೧. ಸ ___ ಗ (ಊ ಲ ರ) __________

೨. ___ ಟ (ಇ ಊ ಲ) __________

೩. ___ ದನ (ಕ ಡ ಈ) __________

೪. ತಬ ___ (ಕ ಊ ಲ) __________

• ಸೂಚಿತ ಅಕ್ಷರಗಳಿರುವ ಪದಗಳನ್ನು ಆರಿಸಿ ಆಯಾ ಚೌಕದಲ್ಲಿ ಬರೆಯಿಸಿ

| ಲ | ಡ | ಇ | ಊ | ಕ |
|---|---|---|---|---|
| | | | | |

ಲವ ದಸರ ವನ ಬಸವ ಇನ

ಗಜ ಊಟ ಉರಗ ಕದ ಉಗಮ

ಕಡಗ ಕರಗ

• ಕಲಿತ ಅಕ್ಷರ/ಪದಗಳನ್ನು ಓದಿಸಿ – ಬರೆಯಿಸಿ

ರ ಗ ಸ ದ ಅ – ಜ ಉ ಮ ಬ ನ

ಪ ಯ ವ ಟ ಚ – ಲ ಡ ಇ ಊ ಕ

©KTBS Not to be republished

| | | | |
|---|---|---|---|
| ಊಟ | ಕದ | ಲಯ | ದಡ |
| ಇನ | ನರ | ಕಸ | ಜನ |
| ಚರಕ | ಕದನ | ನಯನ | ವದನ |
| ಸಮಯ | ವಚನ | ಪವನ | ಉದಯ |
| ಅರಸ | ಚಟಪಟ | ಮದಗಜ | ಮದರಸ |
| ಪಟಪಟ | ಕಲರವ | ಊರದನ | ಊರಜನ |


©KTBS Not to be republished

## ಪಾಠ – ೫

# ಎ ಏ ಐ ತ ಳ


• ಚಿತ್ರ ತೋರಿಸಿ – ಪದ ಹೇಳಿಸಿ

ಎ



ಎರಕ

ಏ



ಏತ

ಐ



ಐದಳ

ತ



ತಬಲ

ಳ



ಕಳಸ

©KTBS Not to be republished

• ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ತಿಳಿಸಿ

ಎ ಏ ಐ ತ ಳ

• ಅಕ್ಷರಗಳನ್ನು ತೋರಿಸಿ – ಬರೆಯಿಸಿ

ಎ ಏ ಐ ತ ಳ

©KTBS Not to be republished


• ಪದಗಳನ್ನು ಓದಿಸಿ

| | | | | |
|---|---|---|---|---|
| ಏಕ | ಏತ | ತಡ | ತಳ | ಎಡ |
| ತನಯ | ಕಳಸ | ಬಳಪ | ತವಕ | ಎರಕ |
| ಎಡಚ | ತಬಲ | ಕಡತ | ಕವಳ | ಏಕದಳ |
| ಪಳಪಳ | ಎಡಬಲ | ಪಡವಲ | ತರತರ | ತಳಮಳ |

• ಚುಕ್ಕಿ ಸೇರಿಸಿ – ಪದ ರಚಿಸಲು ಹೇಳಿ

| ಏತ | ತನಯ | ಏಕದಳ |
| --- | --- | --- |
| | | |
| | | |
| | | |
| | | |
| | | |
| | | |
| | | |

• ಚಿತ್ರ ತೋರಿಸಿ – ಪದ ಬರೆಯಿಸಿ



©KTBS Not to be republished

- ಅಕ್ಷರ ಆರಿಸಿ ಪದ ಪೂರ್ಣಗೊಳಿಸಲು ತಿಳಿಸಿ

೧. ____ ರಕ (ಎ ಏ ಳ)

೨. ____ ಕದಳ (ತ ಳ ಏ)

೩. ____ ಳಮಳ (ಳ ತ ಏ)

೪. ಕವ ____ (ಳ ತ ಇ)

- ಈ ಅಕ್ಷರಗಳಿಂದ ಆರಂಭವಾಗುವ ಒಂದೊಂದು ಪದ ಬರೆಯಿಸಿ

| | |
|---|---|
| ಎ | |
| ಏ | |
| ಐ | |
| ತ | |
| ರ | |

©KTBS Not to be republished

- ಕಲಿತ ಅಕ್ಷರ/ಪದಗಳನ್ನು ಓದಿಸಿ ಬರೆಯಿಸಿ

ರ ಗ ಸ ದ ಅ – ಜ ಉ ಮ ಬ ನ

ಪ ಯ ವ ಟ ಚ – ಲ ಡ ಇ ಊ ಕ

ಎ ಏ ಐ ತ ಳ

| | | | | |
|---|---|---|---|---|
| ಏತ | ತಳ | ಎಡ | ಏಕ | ತಡ |
| ಬಳಪ | ಕಡಪ | ಚಮಚ | ಜಳಕ | ಕವನ |
| ಪವನ | ಐದಳ | ತವಕ | ಕವಳ | ಸರಳ |
| ಎಡಬಲ | ಕಳವಳ | ನವರಸ | ತಳಮಳ | ಸಮಬಲ |

©KTBS Not to be republished

## ಪಾಠ – ೬

# ಆ ಈ ಓ ಣ

• ಚಿತ್ರ ತೋರಿಸಿ ಪದಗಳನ್ನು ಹೇಳಿಸಿ

ಆ




ಆಟ

ಈ




ಈಚಲ

ಓ



ಓಟ

ಣ



ಕಣ

©KTBS Not to be republished

• ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ತಿಳಿಸಿ

ಆ ಈ ಓ ಣ

• ಅಕ್ಷರಗಳನ್ನು ತೋರಿಸಿ – ಬರೆಯಿಸಿ

ಆ ಈ ಓ ಣ

• ಪದಗಳನ್ನು ಓದಿಸಿ

| | | | | |
|---|---|---|---|---|
| ಆಟ | ಆತ | ಹಣ | ಮಣ | ಓಟ |
| ಈತ | ಆಯತ | ಓರಣ | ಓಲಗ | ಆವರಣ |

©KTBS Not to be republished

• ಚುಕ್ಕಿ ಸೇರಿಸಿ – ಪದ ರಚಿಸಲು ತಿಳಿಸಿ


| ಆಟ | ಊಟ | ಕಣಜ | ಓಟ |
| --- | --- | --- | --- |
| | | | |
| | | | |
| | | | |
| | | | |
| | | | |
| | | | |
| | | | |

©KTBS Not to be republished

• ಚಿತ್ರ ತೋರಿಸಿ – ಪದ ಬರೆಯಿಸಿ







• ಅಕ್ಷರಗಳನ್ನು ಬಳಸಿ ಪದಗಳನ್ನು ರಚಿಸಿ ಬರೆಯಲು ತಿಳಿಸಿ.

ಆ ಈ ಓ ಟ ತ ಗ ಲ ರ ಸ

• ಕಲಿತ ಅಕ್ಷರ/ಪದಗಳು – ಓದಿಸಿ ಬರೆಯಿಸಿ

ರ ಗ ಸ ದ ಅ

ಪ ಯ ವ ಟ ಚ

ಎ ಏ ಐ ತ ಳ

ಜ ಉ ಮ ಬ ನ

ಲ ಡ ಇ ಊ ಕ

ಆ ಈ ಓ ಣ

| | | | | |
|---|---|---|---|---|
| ಆಟ | ಓಟ | ಊಟ | ಕಣ | ಮಣ |
| ಅಗಸ | ಓಲಗ | ಓರಣ | ಕಣಜ | ಕದನ |
| ಕವನ | ಚರಣ | ನಮನ | ವದನ | ನಯನ |
| ಆಗಮನ | ಊರಜನ | ಕಳವಳ | ತಳಮಳ | ಆವರಣ |

©KTBS Not to be republished

## ನನ್ನ ಸಾಧನೆ – ೨

• ಅಕ್ಷರಗಳನ್ನು ಓದಿಸಿ – ಬರೆಯಿಸಿ.

ಎ ಐ ಓ ಆ ತ ಕ ಡ ಇ ಲ ಈ

• ಅಕ್ಷರಗಳನ್ನು ಬಳಸಿ ಪದಗಳನ್ನು ರಚಿಸಲು ತಿಳಿಸಿ

ತ ಆ ಟ ಓ ದ ಕ ಊ ಲ ಏ ಳ ಐ

• ಪದಗಳನ್ನು ಓದಿಸಿ ಬರೆಯಿಸಿ

ಊರ ಜನರ ಕರಗ

©KTBS Not to be republished

ಕಡಪದ　　　ಗಣಪನ　　　ವದನ

______________________________________
______________________________________
______________________________________
______________________________________

ಮರದ　　　ಚರಕ　　　ಪಳಪಳ

______________________________________
______________________________________
______________________________________
______________________________________

- ಖಾಲಿ ಜಾಗ ತುಂಬಿ ಪದ ಪೂರ್ಣಗೊಳಿಸಲು ತಿಳಿಸಿ

| | |
|---|---|
| ಕ __ ನ | ಅ __ ತ |
| ಐ __ ಳ | ಓ __ ಣ |
| ಚ __ ಕ | ಆವರ __ |
| ಜಳ __ | ಆಗಮ __ |
| ಕವ __ | ತ __ ಮಳ |

©KTBS Not to be republished

# ಪಾಠ – ೭

# ಒ ಹ ಔ ಛ


• ಚಿತ್ರ ತೋರಿಸಿ – ಪದ ಹೇಳಿಸಿ

ಒ



ಒಣಮರ

ಹ




ಹಯ (ಕುದುರೆ)

ಔ



ಔತಣ

ಛ



ಛಗ (ಮೇಕೆ)

©KTBS Not to be republished

- ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ತಿಳಿಸಿ

ಒ ಹ ಔ ಳ

- ಅಕ್ಷರಗಳನ್ನು ತೋರಿಸಿ – ಬರೆಯಿಸಿ

ಒ ಹ ಔ ಳ

ಒ ಹ ಔ ಳ

- ಪದಗಳನ್ನು ಓದಿ

| | | | | |
|---|---|---|---|---|
| ಒಣ | ಒಳ | ಹಯ | ಹಣ | ಹದ |
| ಹಯ | ಛಗ | ಛಲ | ಹರಣ | ಔಡಲ |
| ಔತಣ | ಔರಸ | ಹಡಪ | ಹನನ | |

©KTBS Not to be republished

• ಚುಕ್ಕಿ ಸೇರಿಸಿ – ಪದ ರಚಿಸಲು ತಿಳಿಸಿ

| ಆಟ | ಊಟ | ಕಣಜ | ಓಟ |
|---|---|---|---|
| | | | |
| | | | |
| | | | |
| | | | |
| | | | |

• ಗೆರೆ ಎಳೆದಿರುವ ಅಕ್ಷರ ಗುರುತಿಸಿ ಸರಿಯಾಗಿ ಉಚ್ಚರಿಸಲು ತಿಳಿಸಿ

ಹಯ ಛಗ ಒಣಮರ ಔಡಲ

• ಕೊಟ್ಟಿರುವ ಅಕ್ಷರ ಬಳಕೆಯಾಗಿರುವ ಪದಗಳನ್ನು ಗುರುತಿಸಿ ಅಡಿಗೆರೆ ಹಾಕಿ

[ಛ ಔ ಒ ಹ]

ಹಣ ಛಲ ಒಣ ಒಳ

ಹರಣ ಔರಸ ಔತಣ ಔಡಲ

• ಕಲಿತ ಅಕ್ಷರ ಮತ್ತು ಪದಗಳನ್ನು ಓದಿಸಿ – ಬರೆಯಿಸಿ

ರ ಗ ಸ ದ ಅ

ಪ ಯ ವ ಟ ಚ

ಎ ಏ ಐ ತ ಳ

ಜ ಉ ಮ ಬ ನ

ಲ ಡ ಇ ಊ ಕ

ಆ ಈ ಓ ಣ

ಒ ಹ ಔ ಛ

©KTBS Not to be republished

| | | | | |
|---|---|---|---|---|
| ಹಯ | ಒಣ | ಹಣ | ಛಲ | ಒಳ |
| ಪದ | ಬನ | ಓರಣ | ಔತಣ | ಹರಣ |
| ಔಡಲ | ಔರಸ | ಐದಳ | ಪಚನ | ಒಣಮರ |
| ರಸಮಯ | ಸಮರಸ | | | |

©KTBS
Not to be republished

## ಪಾಠ – ೮

# ಧ ಥ ಢ ಭ


• ಚಿತ್ರ ತೋರಿಸಿ ಪದ ಹೇಳಿಸಿ

ಧ



ಧನ

ರ



ರಥ

ಢ



ಢಣಢಣ

ಭ



ಭಟ


©KTBS Not to be republished

- ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ತಿಳಿಸಿ

ಧ ಥ ಢ ಭ

- ಅಕ್ಷರಗಳನ್ನು ತೋರಿಸಿ – ಬರೆಯಿಸಿ

# ಧ ಥ ಢ ಭ



- ಪದಗಳನ್ನು ಓದಿಸಿ


| | | | | |
|---|---|---|---|---|
| ಭರ | ಧನ | ಭವ | ಪಥ | ಭಟ |
| ಕಥನ | ಭರತ | ಮಥನ | ಭವನ | ಭಜಕ |
| ಧಗಧಗ | ಥಳಥಳ | ಢಣಢಣ | ಥಕಥಕ | ಆಭರಣ |

©KTBS Not to be republished


• ಚುಕ್ಕಿ ಸೇರಿಸಿ, ಪದ ರಚಿಸಲು ತಿಳಿಸಿ

| ಭವನ | ಥಳಥಳ | ಭಯ | ಧನ |
|---|---|---|---|
| | | | |
| | | | |
| | | | |
| | | | |

• ಚಿತ್ರ ತೋರಿಸಿ – ಪದ ಬರೆಯಿಸಿ







________ ________ ________

• ಕೊಟ್ಟಿರುವ ಅಕ್ಷರಗಳಲ್ಲಿ ಸರಿಯಾದ ಅಕ್ಷರ ಆರಿಸಿ ಹೇಳಿಸಿ – ಬರೆಯಿಸಿ

೧. ____ ನ (ಭ ಧ ಢ)

೨. ಕ ____ ನ (ಥ ಭ ಧ)

೩. ____ ಳ ____ ಳ (ಢ ಥ ಭ)

೪. ____ ಟ (ಭ ಧ ಥ)

©KTBS Not to be republished

• ಎಡಭಾಗದಲ್ಲಿರುವ ಅಕ್ಷರಕ್ಕೆ ಬಲಭಾಗದಲ್ಲಿರುವ ಅದೇ ಅಕ್ಷರವನ್ನು ಹೊಂದಿರುವ ಪದವನ್ನು ಹೊಂದಿಸಿ ಬರೆಯಲು ತಿಳಿಸಿ

೧. ಥ : ಭವನ ________

೨. ಧ : ಮಥನ ________

೩. ಢ : ಧನ ________

೪. ಭ : ಢಣಢಣ ________

©KTBS Not to be republished

• ಕಲಿತ ಅಕ್ಷರ/ಪದಗಳನ್ನು ಓದಿಸಿ – ಬರೆಯಿಸಿ

ರ ಗ ಸ ದ ಅ    ಜ ಉ ಮ ಬ ನ

ಪ ಯ ವ ಟ ಚ    ಲ ಡ ಇ ಊ ಕ

ಎ ಏ ಐ ತ ಳ    ಆ ಈ ಓ ಣ

ಒ ಹ ಔ ಛ    ಧ ಥ ಢ ಭ

| | | | | |
|---|---|---|---|---|
| ಭರ | ಭವ | ಧನ | ಪಥ | ಭಯ |
| ಭಟ | ತಳ | ದಡ | ದಳ | ಕಥನ |
| ಭರತ | ಮಥನ | ಭವನ | ಧವಳ | ಐದಳ |

ಓರಣ ಧಗಧಗ ಥಳಥಳ ಢಣಢಣ ಥಕಥಕ

ಆಭರಣ ಸಮತಲ ಸಮಬಲ


©KTBS Not to be republished

## ಪಾಠ – ೯

# ಠ ಘ ಫ ಝ

- ಚಿತ್ರ ತೋರಿಸಿ – ಪದ ಹೇಳಿಸಿ

ಜ



ಜಠರ

ಘ




ಘಟ

ಫ



ಫಲ

ಝ



ಝಳ

©KTBS Not to be republished

• ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ತಿಳಿಸಿ

ಠ ಘ ಫ ಝ

• ಅಕ್ಷರಗಳನ್ನು ತೋರಿಸಿ ಬರೆಯಿಸಿ

ಠ ಘ ಫ ಝ

ಠ ಘ ಫ ಝ

©KTBS Not to be republished

• ಪದಗಳನ್ನು ಓದಿಸಿ

| | | | | |
|---|---|---|---|---|
| ಘಟ | ಝಳ | ಮಠ | ಫಲ | ಹಠ |
| ಘನ | ಘಟಕ | ಫಲಕ | ಪಠಣ | ಸಫಲ |
| ಜಠರ | ಝಳಝಳ | ಫಳಫಳ | ಝಣಝಣ | ಠಣಠಣ |

- ಚುಕ್ಕಿ ಸೇರಿಸಿ ಪದ ರಚಿಸಲು ತಿಳಿಸಿ

ಜಠರ ಘಟ ಘಟಕ ಝಳ

- ಚಿತ್ರ ತೋರಿಸಿ ಪದ ಬರೆಯಿಸಿ







©KTBS
Not to be republished

• **ಕೊಟ್ಟಿರುವ ಅಕ್ಷರಗಳಲ್ಲಿ ಸರಿಯಾದ ಅಕ್ಷರ ಆರಿಸಿ ಸೇರಿಸಿ – ಬರೆಯಿಸಿ**

೧. ____ ಟ (ಖ ಘ ಫ)

೨. ____ ನ (ಫ ಖ ಘ)

೩. ____ ತ (ಫ ಹ ಖ)

೪. ಮ ____ (ಖ ತ ಘ)

೫. ____ ಲ (ಘ ಖ ಫ)

೬. ____ ಣ (ಫ ಖ ಝ)

೭. ____ ಳಫಳ (ಫ ಖ ಘ)

©KTBS Not to be republished

• **ಕೊಟ್ಟಿರುವ ಪದಗಳನ್ನು ವಾಕ್ಯಗಳಲ್ಲಿ ಗುರುತಿಸಿ ಅಡಿ ಗೆರೆ ಎಳೆಯಲು ತಿಳಿಸಿ**

ಹತ ಫಲಕ ಫಳಫಳ ಜಲ ಮತ ಸಫಲ

೧. ಅರಸನ ಹತ ಬಹಳ

೨. ಊರ ವನದ ಫಲಕ

೩. ಘಟದ ಜಲ

೪. ಮತದ ಊಟ

೫. ಊರ ಜನರ ದಸರ ಸಫಲ

೬. ಜನರ ಆಭರಣ ಫಳಫಳ

• ಪದಗಳನ್ನು ಹೇಳಿಸಿ ಬರೆಯಿಸಿ

| ಘಮಘಮ | ಫಳಫಳ | ಥಳಥಳ | ಝುಳಝುಳ |
|---|---|---|---|

• ಕಲಿತ ಅಕ್ಷರ/ಪದಗಳನ್ನು ಓದಿಸಿ – ಬರೆಯಿಸಿ

ರ ಗ ಸ ದ ಅ

ಪ ಯ ವ ಟ ಚ

ಎ ಏ ಐ ತ ಳ

ಒ ಹ ಔ ಛ

ಜ ಉ ಮ ಬ ನ

ಲ ಡ ಇ ಊ ಕ

ಆ ಈ ಓ ಣ

ಧ ಥ ಢ ಭ

ಠ ಘ ಫ ಝ

ಘಟ ಝುಳ ಮಠ ಫಲ

ಹಠ ಘನ ಫಲಕ ಭವನ

ಜಠರ ಪವನ ಧವಳ ಕಥನ

©KTBS
Not to be republished

| | | | |
|---|---|---|---|
| ಝುಳಝುಳ | ಫಳಫಳ | ಝುಣಝುಣ | ಠಣಠಣ |
| ಸಮತಳ | ಒಣಮರ | ರಸಮಯ | ಸಮರಸ |

©KTBS Not to be republished

ಪಾಠ – ೧೦

# ಖ ಝ ಶ ಷ

• ಚಿತ್ರ ತೋರಿಸಿ ಪದಗಳನ್ನು ಹೇಳಿಸಿ.

ಖ




ಖಗ

ಝ

ಝ

ಝ

ಶ



ಶರ

ಷ



ಔಷಧ

©KTBS Not to be republished

• ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ತಿಳಿಸಿ

ಖ ಝ ಶ ಷ

• ಅಕ್ಷರಗಳನ್ನು ತೋರಿಸಿ – ಬರೆಯಲು ತಿಳಿಸಿ

ಖ ಝ ಶ ಷ

©KTBS Not to be republished

• ಪದ ಓದಿಸಿ – ಬರೆಯಿಸಿ

| | | | | |
|---|---|---|---|---|
| ಖಗ | ಸಖ | ಋಣ | ಉಷ | ಈಶ |
| ಋತ | ಆಶ | ವಶ | ಶಯನ | ಶತಕ |
| ದಶಕ | ಉಷ | ಪರವಶ | ಔಷಧ | ಔತಣ |

• ಚುಕ್ಕಿ ಸೇರಿಸಿ – ಪದ ರಚಿಸಲು ತಿಳಿಸಿ

ಸಖ ದಶಕ ಖಗ ಉಷ

©KTBS Not to be republished

• ಅಕ್ಷರಗಳನ್ನು ಆರಿಸಿ ಪದಗಳನ್ನು ಪೂರ್ಣಗೊಳಿಸಲು ತಿಳಿಸಿ

೧. ಉ ____ (ಶ ಸ ಷ)

೨. ____ ಯನ (ಶ ಮ ಚ)

೩. ಪರವ ____ (ಸ ಷ ಶ)

೪. ಈ ____ (ಶ ದ ಬ)

೫. ಸ ____ (ಕ ಖ ಸ)

• ಗೆರೆ ಎಳೆದ ಅಕ್ಷರ ಗುರುತಿಸಿ – ಸ್ಪಷ್ಟವಾಗಿ ಉಚ್ಚರಿಸಲು ತಿಳಿಸಿ

ಖಗ ಋಣ ಶತ ಶಪಥ ಶರಣ ಔಷಧ

• ಕೊಟ್ಟಿರುವ ಅಕ್ಷರಗಳನ್ನು ಬಳಸಿ ಪದ ರಚಿಸಿ

ಶ ಕ ಟ ಬ ರ ತ ಮ ನ ಣ

____ ____ ____
____ ____ ____
____ ____ ____
____ ____ ____
____ ____ ____
____ ____ ____
____ ____ ____

©KTBS Not to be republished

• ಕಲಿತ ಅಕ್ಷರ ಮತ್ತು ಪದಗಳನ್ನು ಓದಿಸಿ – ಬರೆಯಿಸಿ

ರ ಗ ಸ ದ ಅ

ಜ ಉ ಮ ಬ ನ

ಪ ಯ ವ ಟ ಚ

ಲ ಡ ಇ ಊ ಕ

ಎ ಏ ಐ ತ ಳ

ಆ ಈ ಓ ಣ

ಒ ಹ ಔ ಛ

ಧ ಥ ಢ ಭ

ಠ ಘ ಫ ಝ

ಖ ಞ ಶ ಷ

ಶರ ಖಗ ಘನ ಸಖ ಞಣ

ಈಶ ಭಟ ದಶಕ ಫಲಕ ಭವನ

ಔಷಧ ಘಟಕ ಐದಳ ಜಠರ ಉದಯ

ಸಮರ ಹರಣ ಘಮಘಮ ಶತಶರ ಹಯವದನ

ಝಳಝಳ ಢಣಢಣ ಪರವಶ ಸಮರಸ

©KTBS Not to be republished

## ಪಾಠ – ೧೧

# ಅಂ ಅಃ ಙ ಞ

• ಚಿತ್ರ ತೋರಿಸಿ ಪದ / ಅಕ್ಷರಗಳನ್ನು ಹೇಳಿಸಿ

ಅಂ



ಅಂಗಳ

ಅಃ

ಙ

ಞ

©KTBS Not to be republished

- ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲು ತಿಳಿಸಿ

ಅಂ ಅಃ ಙ ಞ

- ಅಕ್ಷರಗಳನ್ನು ತೋರಿಸಿ – ಬರೆಯಿಸಿ

ಅಂ ಅಃ ಙ ಞ

©KTBS Not to be republished

- ಪದ ಓದಿಸಿ – ಬರೆಯಿಸಿ

| | | | |
|---|---|---|---|
| ಅಂದ | ಅಂಗ | ಅಂಶ | ಅಂಕ |
| ಅಂಜನ | ಅಂತಃಕರಣ | ಅಂತಃಕಲಹ | ಅಂತಃಪುರ |

• ಅಕ್ಷರಗಳನ್ನು ತೋರಿಸಿ – ಬರೆಯಲು ತಿಳಿಸಿ

| ಅಂ | ಅಃ | ಅಂ | ಅಃ | ಅಂ | ಅಃ |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| ಙ | ಞ | ಙ | ಙ | ಞ | ಞ |
| | | | | | |
| | | | | | |
| | | | | | |
| | | | | | |
| | | | | | |

©KTBS Not to be republished

• ಓದಿಸಿ – ಬರೆಯಿಸಿ

| ಅಂಬರ | ಅಂಗಳ | ಅಂತಃಕರಣ | ಅಂತಃಕಲಹ |
|---|---|---|---|

• ಕಲಿತ ಅಕ್ಷರ ಮತ್ತು ಪದಗಳನ್ನು ಓದಿಸಿ – ಬರೆಯಿಸಿ

ರ ಗ ಸ ದ ಅ

ಪ ಯ ವ ಟ ಚ

ಎ ಏ ಐ ತ ಳ

ಒ ಹ ಔ ಛ

ಠ ಘ ಫ ಝ

ಜ ಉ ಮ ಬ ನ

ಲ ಡ ಇ ಊ ಕ

ಆ ಈ ಓ ಣ

ಧ ಥ ಢ ಭ

ಖ ಋ ಶ ಷ

ಅಂ ಅಃ ಙ ಞ

| | | | | |
|---|---|---|---|---|
| ಅಂದ | ಅಂಗ | ಅಂಶ | ಅಂಕ | ಗಂಧ |
| ಚಂದ | ಕಂದ | ಹಂದರ | ಅಂಬರ | ಅಂಜನ |
| ಚಂದನ | ಇಂಧನ | ಆನಂದ | ಶಂಕರ | ಹಂತಕ |
| ಆಡಂಬರ | ನಂದನವನ | ಅಲಂಕರಣ | ಅಂತರಂಗ | ಭಯಂಕರ |

©KTBS Not to be republished

## ನನ್ನ ಸಾಧನೆ – ೩

• ಅಕ್ಷರಗಳನ್ನು ತೋರಿಸಿ – ಬರೆಯಿಸಿ

ಖ ಚ ಝ ಔ ಶ ಹ ಷ ಒ ರ ಥ ಢ

ಠ ಅಃ ಫ ಅಂ ಞ ಘ ಜ ಝ ಧ ಭ

• ಪದಗಳನ್ನು ಓದಿಸಿ – ಬರೆಯಿಸಿ

ಔರಸ

ಹರಣ

ಭವನ

©KTBS
Not to be republished

ಕಥನ

ಘಟಕ

ಫಲಕ

ಝುಳಝುಳ

ಘಮಘಮ

ಢಣಢಣ

ಥಳಥಳ


ಅಂತಃಕರಣ

ಅಂತಃಕಲಹ

©KTBS Not to be republished

- ಚಿತ್ರ ತೋರಿಸಿ – ಪದ ಬರೆಯಲು ತಿಳಿಸಿ

 ______

 ______

 ______

 ______

 ______

 ______

 ______

 ______

- ವಾಕ್ಯಗಳನ್ನು ಓದಿಸಿ – ಬರೆಯಿಸಿ

ಒಣಮರದ ಚರಕ

ಊರ ಭವನದ ಫಲಕ

©KTBS
Not to be republished

ಅರಸನ ಆಭರಣ ಥಳಥಳ

ನಗರದ ಜನರ ದಸರ ಸಫಲ

ಮಠದ ಊಟ ಜನರ ಸಂತಸ

ವನದ ಔಷಧ ಘಮಘಮ

• ಈ ಅಕ್ಷರಗಳನ್ನು ಓದಿಸಿ, ಹೇಳಿಸಿ

## ಕನ್ನಡ ವರ್ಣಮಾಲೆ

ಅ ಆ ಇ ಈ ಉ ಊ ಋ

ಎ ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ ಷ ಸ ಹ ಳ

©KTBS Not to be republished

# ಗುಣಿತ ಅಕ್ಷರ ಕಲಿಕಾ ಪಾಠಗಳು

## ಪಾಠ – ೧

- ಅಕ್ಷರಗಳನ್ನು ಓದಿಸಿ



**ಅ ಆ ಇ ಈ ಉ ಊ ಎ ಏ ಒ ಓ**


- ಚಿತ್ರ ತೋರಿಸಿ – ಪದ ಹೇಳಿಸಿ.










©KTBS Not to be republished

• ಸ್ವರ ಚಿಹ್ನೆಗಳ ಪರಿಚಯ

| ˏ | ಾ | ಿ | ೀ | ು | ೂ | ೆ | ೇ | ೊ | ೋ |
|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಎ | ಏ | ಒ | ಓ |

• ಅಕ್ಷರಗಳಿಗೆ ಸ್ವರ ಚಿಹ್ನೆಗಳನ್ನು ಹಚ್ಚಿ ಬರೆಯಲು ತಿಳಿಸಿ

| ˏ<br>ಅ | ಾ<br>ಆ | ಿ<br>ಇ | ೀ<br>ಈ | ು<br>ಉ | ೂ<br>ಊ | ೆ<br>ಎ | ೇ<br>ಏ | ೊ<br>ಒ | ೋ<br>ಓ |
|---|---|---|---|---|---|---|---|---|---|
| ಕ | ಕಾ | ಕಿ | ಕೀ | ಕು | ಕೂ | ಕೆ | ಕೇ | ಕೊ | ಕೋ |
| ಖ | | | | | | | | | |
| ಗ | | | | | | | | | |
| ಘ | | | | | | | | | |
| ಚ | | | | | | | | | |
| ಛ | ಛಾ | ಛಿ | ಛೀ | ಛು | ಛೂ | ಛೆ | ಛೇ | ಛೊ | ಛೋ |
| ಜ | | | | | | | | | |
| ಝ | | | | | | | | | |
| ಟ | | | | | | | | | |
| ಠ | ಠಾ | ಠಿ | ಠೀ | ಠು | ಠೂ | ಠೆ | ಠೇ | ಠೊ | ಠೋ |
| ಡ | | | | | | | | | |
| ಢ | | | | | | | | | |
| ಣ | ಣಾ | ಣಿ | ಣೀ | ಣು | ಣೂ | ಣೆ | ಣೇ | ಣೊ | ಣೋ |
| ತ | | | | | | | | | |

©KTBS Not to be republished

| | | | | | | | | | |
|---|---|---|---|---|---|---|---|---|---|
| ಥ | | | | | | | | | |
| ದ | | | | | | | | | |
| ಧ | ಧಾ | ಧಿ | ಧೀ | ಧು | ಧೂ | ಧೆ | ಧೇ | ಧೊ | ಧೋ |
| ನ | | | | | | | | | |
| ಪ | | | | | | | | | |
| ಫ | ಫಾ | ಫಿ | ಫೀ | ಫು | ಫೂ | ಫೆ | ಫೇ | ಫೊ | ಫೋ |
| ಬ | | | | | | | | | |
| ಭ | | | | | | | | | |
| ಮ | ಮಾ | ಮಿ | ಮೀ | ಮು | ಮೂ | ಮೆ | ಮೇ | ಮೊ | ಮೋ |
| ಯ | | | | | | | | | |
| ರ | | | | | | | | | |
| ಲ | ಲಾ | ಲಿ | ಲೀ | ಲು | ಲೂ | ಲೆ | ಲೇ | ಲೊ | ಲೋ |
| ವ | | | | | | | | | |
| ಶ | | | | | | | | | |
| ಷ | ಷಾ | ಷಿ | ಷೀ | ಷು | ಷೂ | ಷೆ | ಷೇ | ಷೊ | ಷೋ |
| ಸ | | | | | | | | | |
| ಹ | | | | | | | | | |
| ಳ | ಳಾ | ಳಿ | ಳೀ | ಳು | ಳೂ | ಳೆ | ಳೇ | ಳೊ | ಳೋ |

©KTBS Not to be republished


- ಪದಗಳನ್ನು ಓದಿಸಿ – ಬರೆಯಿಸಿ

| | | | | |
|---|---|---|---|---|
| ಸರ | ದನ | ನಗರ | ಉದಯ | ಮದಗಜ |
| ಪಾದ | ಬಾಣ | ಸಾಧನ | ಸಾಗರ | ದಾಸವಾಳ |
| ಕಿವಿ | ಜಿಗಿ | ಕಿಟಕಿ | ವಿಮಾನ | ಹಿಮಾಲಯ |
| ಬೀಗ | ಚೀಲ | ನೀರಾವಿ | ಗೀಜಗ | ದೀಪಾವಳಿ |
| ಗುಡಿ | ಕುರಿ | ಬುಗರಿ | ಚುಟುಕು | ಗುಡಿಸಲು |
| ಹೂವು | ಮೂಗು | ಕೂದಲು | ಜೂಟಾಟ | ಮೂಗುದಾರ |
| ಹೆಡೆ | ನೆಲ | ಗೆಣಸು | ನೆಗಡಿ | ಗೆಳೆತನ |
| ಮೇಕೆ | ಜೇಡ | ದೇವರು | ನೇಗಿಲು | ಜೇನುಗೂಡು |
| ಕೊಡೆ | ದೊರೆ | ಕೊಳಲು | ಮೊಸಳೆ | ಜೊತೆಗಾರ |
| ಟೋಪಿ | ದೋಣಿ | ಕೋಗಿಲೆ | ಜೋಕಾಲಿ | ಯೋಗಾಸನ |

©KTBS Not to be republished

• ಚಿತ್ರ ತೋರಿಸಿ – ಪದಗಳನ್ನು ಬರೆಯಿಸಿ













©KTBS Not to be republished

• ಅಕ್ಷರ ಆರಿಸಿ ಪದಗಳನ್ನು ಪೂರ್ಣಗೊಳಿಸಲು ತಿಳಿಸಿ

೧. ____ ಹಸ (ಸಾ ಸ ಶ)

೨. ದಿನ ____ (ಸಿ ಶಿ ಷಿ)

೩. ____ ರಾವರಿ (ಕೀ ನೀ ಮೀ)

೪. ಚು ____ ಕು (ಸು ತು ಟು)

೫. ____ ಟಾಟ (ಜೂ ಜಾ ಝೂ)

೬. ಗೆ ____ ಯ (ಳಾ ಳೇ ಳೆ)

೭. ಮರ ____ ಬು (ಶೀ ಸೀ ಷೀ)

೮. ನಾಡ ____ ರೆ (ದೊ ಡೊ ಧೊ)

೯. ಹೂ ____ ಟ (ಥೋ ತೋ ನೋ)

೧೦. ಮರ ____ ಲಸ (ಗೆ ನೆ ಮೆ)

• ಅಕ್ಷರಗಳನ್ನು ಬಳಸಿ ಪದ ರಚಿಸಲು ತಿಳಿಸಿ

ಜೋ ಪೀ ಟ ತೋ ಳ ಸೆ ಪಿ ಡೆ ಕ ಡು ಲ ಗೋ ದೋ ಟೋ

______ ______ ______ ______

______ ______ ______ ______

______ ______ ______ ______

©KTBS Not to be republished

## ಪಾಠ – ೨

- ಅಕ್ಷರಗಳನ್ನು ಓದಿಸಿ

# ಐ ಔ ಋ ಅಂ ಅಃ


- ಚಿತ್ರ ತೋರಿಸಿ – ಪದಗಳನ್ನು ಹೇಳಿಸಿ




ರೈಲು



ಸೌತೆಕಾಯಿ



ಹೃದಯ



ಜಿಂಕೆ

ಅಃ

ಕಃ

©KTBS Not to be republished

• ಸ್ವರ ಚಿಹ್ನೆಗಳ ಪರಿಚಯ

| | | | | |
|---|---|---|---|---|
| ೈ | ೌ | ೃ | ಂ | ಃ |
| ಐ | ಔ | ಋ | ಅಂ | ಅಃ |
| ಕೈ | ಕೌ | ಕೃ | ಕಂ | ಕಃ |
| ಖ | | | | |
| ಗ | | | | |
| ಘ | | | | |
| ಚ | | | | |
| ಛ | | | | |
| ಜ | | | | |
| ಝ | | | | |
| ಟ | | | | |
| ಠ | | | | |
| ಡ | | | | |
| ಢ | | | | |
| ಣ | | | | |
| ತ | | | | |
| ಥ | | | | |

©KTBS Not to be republished

| | | | | |
|---|---|---|---|---|
| ದ | | | | |
| ಧ | | | | |
| ನ | | | | |
| ಪ | | | | |
| ಫ | | | | |
| ಬ | | | | |
| ಭ | | | | |
| ಮ | | | | |

- **ಪದಗಳನ್ನು ಓದಿಸಿ – ಬರೆಯಿಸಿ**

ಕೈ ಟೈರು ಮೈಲಿ ಪೈರು ಮೈದಾನ

ಸೈನಿಕ ನೌಕೆ ಚೌಕ ಚೌರಿಗೆ ನೌಕರ

ಸೌರಭ ಸೌತೆಕಾಯಿ ಗೃಹ ಕೃಷಿ ಮೃಗ

ಕೃತಕ ಆಕೃತಿ ಜಾಗೃತಿ ಮೃಗಾಲಯ ಮೃಗರಾಜ

ಕೃಷಿಕಾರ ಗೃಹಶಾಂತಿ ಚೆಂಡು ಗೊಂಬೆ ಅಂಗಳ

ಚಂದಿರ ಚದುರಂಗ ಬಾನಂಗಳ ದುಃಖ ಅಂತಃಕರಣ

ಅಂತಃಪುರ ಮನಃಪಟಲ

©KTBS Not to be republished

- ಚಿತ್ರ ನೋಡಿ – ಪದ ಬರೆಯಲು ತಿಳಿಸಿ

- ಪದ – ಚಿತ್ರ ಹೊಂದಿಸಲು ತಿಳಿಸಿ

ಅ. ಟೈರು  ________




ಆ. ಗೃಹ  ________

ಇ. ಅಂಬಾರಿ  ________


ಈ. ಸೌತೆಕಾಯಿ  ________

©KTBS Not to be republished




• ಗುಣಿತಾಕ್ಷರ ಹಾಗೂ ಪದ ಸಹಿತ ಚಿತ್ರ

| | | | | |
|---|---|---|---|---|
| ಕ್ + ಅ | ಽ | ಕ | ಕದ |  |
| ಕ್ + ಆ | ಾ | ಕಾ | ಕಾನನ |  |
| ಕ್ + ಇ | ಿ | ಕಿ | ಕಿಟಕಿ |  |
| ಕ್ + ಈ | ೀ | ಕೀ | ಕೀಲಿ |  |

©KTBS Not to be republished

| | | | | |
|---|---|---|---|---|
| ಕ್ + ಉ | ು | ಕು | ಕುರಿ |  |
| ಕ್ + ಊ | ೂ | ಕೂ | ಕೂಸು |  |
| ಕ್ + ಋ | ೃ | ಕೃ | ಕೃತಿ |  |
| ಕ್ + ಎ | ೆ | ಕೆ | ಕೆರೆ |  |

©KTBS Not to be republished

| | | | | |
|---|---|---|---|---|
| ಕ್ + ಏ | ೇ | ಕೇ | ಕೇಶ |  |
| ಕ್ + ಐ | ೈ | ಕೈ | ಕೈ |  |
| ಕ್ + ಒ | ೊ | ಕೊ | ಕೊಡ |  |
| ಕ್ + ಓ | ೋ | ಕೋ | ಕೋಡಗ |  |

©KTBS Not to be republished

| | | | | |
|---|---|---|---|---|
| ಕ್ + ಔ | ೌ | ಕೌ | ಕೌಂಗು |  |
| ಕ್ + ಅಂ | ಂ | ಕಂ | ಕಂದ |  |
| ಕ್ + ಅಃ | ಃ | ಕಃ | ಕಃ | **ಕಃ** |

©KTBS Not to be republished

• ಗುಣಿತಾಕ್ಷರಗಳನ್ನು ಪೂರ್ಣಗೊಳಿಸಲು ತಿಳಿಸಿ

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ್ | ಾ | ಿ | ೀ | ು | ೂ | ೃ | ೆ | ೇ | ೈ | ೊ | ೋ | ೌ | ಂ | ಃ |
| | | | | | | | | | | | | | | |
| | | | | | | | | | | | | | | |
| ಗ | ಗಾ | ಗಿ | ಗೀ | ಗು | ಗೂ | ಗೃ | ಗೆ | ಗೇ | ಗೈ | ಗೊ | ಗೋ | ಗೌ | ಗಂ | ಗಃ |
| | | | | | | | | | | | | | | |
| | | | | | | | | | | | | | | |
| ಚ | ಚಾ | ಚಿ | ಚೀ | ಚು | ಚೂ | ಚೃ | ಚೆ | ಚೇ | ಚೈ | ಚೊ | ಚೋ | ಚೌ | ಚಂ | ಚಃ |
| | | | | | | | | | | | | | | |
| | | | | | | | | | | | | | | |
| ಜ | ಜಾ | ಜಿ | ಜೀ | ಜು | ಜೂ | ಜೃ | ಜೆ | ಜೇ | ಜೈ | ಜೊ | ಜೋ | ಜೌ | ಜಂ | ಜಃ |
| | | | | | | | | | | | | | | |
| | | | | | | | | | | | | | | |

©KTBS Not to be republished

| | | | | | | | | | | | |
|---|---|---|---|---|---|---|---|---|---|---|---|
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| ಙ | | | ಞ | | | ಣ | | | ಞ | | |

©KTBS Not to be republished

ಜ ಝ ಞ ಝ

©KTBS
Not to be republished

ಲ ಅ ಋ

©KTBS Not to be republished

| | | | | | | | | | | | |
|---|---|---|---|---|---|---|---|---|---|---|---|
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| ೧೩ | | | ೧೪ | | | ೧೭ | | | ೧೮ | | |

• ಸರಿಯಾದ ಅಕ್ಷರವನ್ನು ಬಳಸಿ ಹತ್ತು ಪದಗಳನ್ನು ಬರೆಯಲು ತಿಳಿಸಿ

ಮಾದರಿ : ರೈಲು

| | | | | | |
|---|---|---|---|---|---|
| ಮೂ | ಬೆ | ಲು | ಗೀ | ವೇ | ಗು |
| ಣ | ಕಾ | ಜೇ | ಹೂ | ಗೌ | ದ |
| ನೃ | ರೈ | ನೊ | ಕೆ | ಳೆ | ಹ |
| ವು | ನೌ | ಪ | ದೋ | ಮ | ರು |
| ತ | ಳೆ | ಳಿ | ನು | ರಿ | ಟು |
| ತಿ | ಡ | ಪಾ | ಣೆ | ಕೋ | ಗಾ |

_______________ _______________

_______________ _______________

_______________ _______________

_______________ _______________

_______________ _______________


©KTBS Not to be republished

• ಬಿಟ್ಟ ಸ್ಥಳ ತುಂಬಲು ತಿಳಿಸಿ


| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಚ | | ಚಿ | | ಚು | | ಚೃ | | ಚೇ | | ಚೊ | | ಚೌ | | ಚಃ |
| ಡ | | | ಡೀ | | | ಡೃ | | | ಡೈ | | | ಡೌ | | |
| ತ | | ತಿ | | ತು | ತೂ | | ತೆ | | | ತೊ | | | ತಂ | |
| ದ | ದಾ | | | ದು | | ದೃ | | ದೇ | | | ದೋ | | ದಂ | |
| ನ | | | | ನು | | | | ನೇ | | | ನೋ | | | ನಃ |
| ಪ | | ಪಿ | | ಪು | | ಪೃ | | | ಪೈ | | | ಪೌ | | |
| ಬ | | ಬಿ | | | ಬೂ | | | | ಬೈ | | ಬೋ | | | ಬಃ |
| ಮ | ಮಾ | | ಮೀ | | ಮೂ | | ಮೆ | | | ಮೊ | | ಮೌ | | ಮಃ |
| ವ | | | | ವು | | | ವೆ | | | | ವೋ | | | ವಃ |
| ಸ | | | ಸೀ | | | ಸೃ | | | ಸೈ | | | ಸೌ | | ಸಃ |
| ಹ | | | | | | | | | | | | | | |


## ನನ್ನ ಸಾಧನೆ – ೪


• ಚಿತ್ರ ನೋಡಿ – ಪದ ಬರೆಯಲು ತಿಳಿಸಿ

 ________  ________

 ________  ________

 ________  ________

 ________  ________

 ________  ________

 ________  ________

©KTBS Not to be republished

- **ಪದಗಳನ್ನು ಓದಿ – ಬರೆಯಲು ತಿಳಿಸಿ**

| | | | |
|---|---|---|---|
| ಮದಗಜ | ________ | ದಾಸವಾಳ | ________ |
| ಹಿಮಾಲಯ | ________ | ದೀಪಾವಳಿ | ________ |
| ಗುಡಿಸಲು | ________ | ಮೂಗುದಾರ | ________ |
| ಕೃಷಿಕಾರ | ________ | ಜೇನುಗೂಡು | ________ |
| ಗೆಳೆತನ | ________ | ಮೈದಾನ | ________ |
| ಜತೆಗಾರ | ________ | ಯೋಗಾಸನ | ________ |
| ಸೌತೇಕಾಯಿ | ________ | ಚದುರಂಗ | ________ |
| ಅಂತಃಪುರ | ________ | ಕೆಂದಾವರೆ | ________ |

- **ಗುಣಿತಾಕ್ಷರಗಳಿಂದ ಪದ ರಚಿಸಲು ತಿಳಿಸಿ**

ಕಾ ಗಿ ಚೀ ಜು ಟೈ ತೂ ದೇ ನೈ ಪೂ ಬಾ ಮು
ಲಾ ಬಿ ಸಾ ಕೂ ನೇ ಜೋ ಟೋ ಮೈ ಯೋ

©KTBS Not to be republished

• ಅಕ್ಷರಗಳಿಗೆ ಸ್ವರ ಚಿಹ್ನೆಗಳನ್ನು (ಕಾಗುಣಿತ) ಬರೆಯಲು ತಿಳಿಸಿ

ಕ ________________________________

ಜ ________________________________

ಟ ________________________________

ನ ________________________________

ಬ ________________________________

ರ ________________________________

ಸ ________________________________

ಹ ________________________________

• ಬಿಟ್ಟ ಅಕ್ಷರಗಳನ್ನು ತುಂಬಲು ತಿಳಿಸಿ

| | | | | | | | | |
|---|---|---|---|---|---|---|---|---|
| ಅ | | ಇ | | | ಊ | | | ಐ |
| | | ಓ | | ಅಂ | | | | |
| | ಕ | | ಗ | | ಙ | | | |
| | | ಛ | | ಝ | | | | |
| | ಟ | | | ಢ | | | | |
| | | ಥ | | | ನ | | | |
| | ಪ | | ಬ | | | | | |
| | ರ | | ವ | | | ಸ | | ಳ |

©KTBS Not to be republished

* ಪದಗಳನ್ನು ಗುರುತಿಸಿ ಬರೆಯಲು ತಿಳಿಸಿ

| | | | | | | | | | |
|---|---|---|---|---|---|---|---|---|---|
| ಅ | ರ | ಸ | ಫ | ಸ | ಖ | ಳ | ರ | ಸ | ಬ |
| ಮ | ವ | ನ | ಫ | ಟ | ಗ | ರ | ಗ | ಸ | ರ |
| ರ | ಠ | ಲ | ಗ | ಖ | ಳ | ನ | ಟ | ಯ | ಲ |
| ದ | ಶ | ರ | ಙ | ಓ | ಲ | ಗ | ಜ | ಓ | ಞ |
| ಝ | ಳ | ನ | ಸ | ಲ | ಟ | ಗ | ನ | ಠ | ಗ |
| ಶ | ಫ | ಫ | ಫ | ಲ | ಕ | ಔ | ಷ | ಧ | ರ |
| ಪ | ಮ | ಛ | ಲ | ಠ | ಹ | ರ | ಐ | ನ | ಜ |
| ಥ | ಚ | ಙ | ಕ | ಪ | ಙ | ಸ | ಸ | ಭ | ಯ |

©KTBS
Not to be republished